DOP 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893


# ಶ್ರೀ ಶಾರದಾ

ಮಾಸಪತ್ರಿಕೆ – 15 ಅಕ್ಟೋಬರ್ 2009

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-9 ಸಂಚಿಕೆ-10 ಪುಟಗಳು-8 Registered Under No.J/UDP/1260/2009-2011 Dated from 01-12-2008 to 30-11-2011.





## ಸಂಭ್ರಮದ ನವರಾತ್ರಿ ಉತ್ಸವ-ಆಕರ್ಷಕ ಸ್ಪರ್ಧೆಗಳು, ಮನಸೆಳೆದ ಯಕ್ಷಗಾನ

ಸಾಮಾನ್ಯವಾಗಿ ಎಲ್ಲಾ ಸ್ಥಾನಿಕ ದ್ರಾವಿಡ ಬ್ರಾಹ್ಮಣರ ಕುಟುಂಬಗಳಲ್ಲಿಯೂ ಹಿರಿಯರ ಮನೆಯಲ್ಲಿ ದೇವಿಯ ಆರಾಧನೆ ನಡೆಯುತ್ತಿರುವುದು ಕಾಣುತ್ತದೆ. ನವರಾತ್ರಿ ಕಳೆದು ಬರುವ ವಿಜಯದಶಮಿಯಂದು ಸಮಗ್ರ ಸಮಾಜದ ಏಳಿಗೆಗಾಗಿ ಚಂಡಿಕಾಹೋಮವನ್ನು ನಡೆಸಿಕೊಂಡು ಬರುವ ಉದ್ದೇಶದಿಂದ ಸ್ಥಾಪನೆ ಯಾಗಿರುವ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಅಂದಿನಿಂದ ಇಂದಿನವರೆಗೂ ನಿರಂತರವಾಗಿ ಚಂಡಿಕಾ ಹೋಮವನ್ನು ವಿಧಿವತ್ತಾಗಿ ಆಚರಿಸಿಕೊಂಡು ಬರುತ್ತಿದೆ. ಶ್ರೀ ಶಾರದಾ ಮಂದಿರದ ಆವರಣದಲ್ಲಿ ಶ್ರೀ ಶಾರದಾ ದೇವಸ್ಥಾನ ಅಸ್ತಿತ್ವಕ್ಕೆ ಬಂದಂದಿನಿಂದ ನವರಾತ್ರಿ ಉತ್ಸವವು ಆಚರಿಸಲ್ಪಡುತ್ತಿದೆ.

ಹಲವಾರು ವರ್ಷಗಳಿಂದ ನಡೆದು ಕೊಂಡು ಬಂದಿರುವಂತೆ ಈ ವರ್ಷವೂ ಶ್ರೀ ಶಾರದಾ ದೇವಸ್ಥಾನದಲ್ಲಿ ನವರಾತ್ರಿ ಉತ್ಸವವು ತಾ.19-09-2009ರಿಂದ 28-09-2009ರ ತನಕ ಸಕಲ ಧಾರ್ಮಿಕ ವಿಧಿಯೊಂದಿಗೆ ನಡೆಸಲ್ಪಟ್ಟಿತು. ಪ್ರತಿದಿನ ಮಧ್ಯಾಹ್ನ ಮತ್ತು ರಾತ್ರಿ ವಿಶೇಷ ಪೂಜೆ ನಡೆಯುತ್ತಿತ್ತು. ಪ್ರತಿದಿನ ದೇವಸ್ಥಾನ ವೇದಿಕೆ ಮತ್ತು ಮಹಿಳಾ ವೇದಿಕೆಯ ಸದಸ್ಯರು ಮತ್ತು ಸಾರ್ವಜನಿಕರು ದೇವಿಯ ಸ್ತೋತ್ರಗಳನ್ನು ಪಠಿಸಿ, ದೇವಿಯ ಭಕ್ತಿಗೀತೆಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಸಾಯಂಕಾಲ 5-30ಕ್ಕೆ ಆರಂಭವಾದ ಈ ಕಾರ್ಯಕ್ರಮ ರಾತ್ರಿ 7-00 ಗಂಟೆಯವರೆಗೂ ನಿರಂತರವಾಗಿ ನಡೆಯುತ್ತಿತ್ತು. ಶ್ರುತಿ, ಲಯಬದ್ಧವಾಗಿ ಹಾಡುತ್ತಿದ್ದ ಶ್ಲೋಕ ಮತ್ತು ಭಜನೆ ಆಸ್ತಿಕರಲ್ಲಿ ಭಕ್ತಿಯನ್ನು ಉಕ್ಕಿಹರಿಸು ವಂತಿತ್ತು. ದೇವಸ್ಥಾನದ ಪರಿಸರದಲ್ಲಿ ದೇವಸಾನ್ನಿಧ್ಯದ ಅರಿವು ಉಂಟಾಗುತ್ತಿತ್ತು. ಶಾರದಾ ಮಂಟಪದ ಪರಿಸರವೆಲ್ಲವೂ ಬಣ್ಣಬಣ್ಣದ ವಿದ್ಯುದ್ದೀಪಗಳಿಂದ ಕಂಗೊಳಿ ಸುತ್ತಿತ್ತು. ಪರಿಸರದ ಎಲ್ಲಾ ವರ್ಗದ ಜನರು ಈ ಕಾರ್ಯಕ್ರಮದಲ್ಲಿ ಭಕ್ತಿಪರವಶತೆಯಿಂದ ಭಾಗವಹಿಸುತ್ತಿದ್ದರು. ಬೆಳ್ಳಿಯ ಪ್ರಭಾವಳಿಯ ಮಧ್ಯೆ ರಜತಪೀಠದ ಮೇಲೆ ಚಿನ್ನಾಭರಣಗಳಿಂದ ಅಲಂಕೃತಳಾದ ಶಾರದಾಮಾತೆ ಮಂದಸ್ಮಿತಳಾಗಿ ಭಕ್ತಾದಿಗಳಿಗೆ ಅಭಯಪ್ರದಾನ ಮಾಡುವಂತೆ ವಿರಾಜಮಾನ ಳಾಗಿದ್ದಳು.

ದಿನಂಪ್ರತಿ ರಾತ್ರಿ ಪೂಜೆಯ ನಂತರ ಧಾನ್ಯಗಳಿಂದ ವಿಧಿವತ್ತಾಗಿ ಸಿದ್ಧಪಡಿಸಿದ ವಿಶೇಷ ಪ್ರಸಾದವನ್ನು ಎಲ್ಲಾ ಭಕ್ತಾಭಿಮಾನಿಗಳಿಗೆ ವಿತರಿಸಲಾಗುತ್ತಿತ್ತು. ದೇವಸ್ಥಾನ ವೇದಿಕೆಯ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಮಹಿಳಾ ವೇದಿಕೆಯ ಪದಾಧಿಕಾರಿಗಳು, ಸದಸ್ಯರು ನವರಾತ್ರಿ ಉತ್ಸವವನ್ನು ನಡೆಸಲು ಸಿದ್ಧತೆಗಳನ್ನು ವ್ಯವಸ್ಥಿತವಾಗಿ ಮಾಡಿದ್ದರು.

ತಾ.28-09-2009ರಂದು ವಿಜಯ ದಶಮಿ. ಶ್ರೀ ಶಾರದಾ ಮಂಟಪದಲ್ಲಿ ಹಬ್ಬದ ಸಂಭ್ರಮ. ಅಂದು ಬೆಳಿಗ್ಗೆ 7-00ಗಂಟೆಗೆ ಸರಿಯಾಗಿ ವೇದಮೂರ್ತಿ ಪಾವಂಜೆ ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ ಶ್ರೀ ಶಾರದಾ ದೇವಸ್ಥಾನದಲ್ಲಿ ಪ್ರಾರ್ಥನೆ ಮಾಡುವುದರ ಮೂಲಕ ಚಂಡಿಕಾ ಯಾಗಕ್ಕೆ ಶುಭಾರಂಭ ಮಾಡಲಾಯಿತು. ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ನಿರ್ದೇಶಕರಾದ ಶ್ರೀ ಬಿ. ಕೃಷ್ಣಮೂರ್ತಿರಾವ್-ಇಂದಿರಾ ದಂಪತಿಗಳು ನಮ್ಮ ಸಮಾಜದ ಪರವಾಗಿ ಚಂಡಿಕಾ ಯಾಗದ ಕರ್ತೃಗಳಾಗಿ ಕಾರ್ಯ ನಿರ್ವಹಿಸಿದರು. ಯಾಗದ ಧಾರ್ಮಿಕ


(3ನೇ ಪುಟಕ್ಕೆ ...)

### ಯಶಸ್ವೀ ಪ್ರಯೋಗ ಜಾಂಬವತಿ ಕಲ್ಯಾಣ ಯಕ್ಷಗಾನ



ವಿಜಯದಶಮಿಯಂದು ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಬಳಗ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ಪ್ರದರ್ಶಿಸಿದ 'ಜಾಂಬವತಿ ಕಲ್ಯಾಣ' ಯಕ್ಷಗಾನ ಬಯಲಾಟದ ದೃಶ್ಯ

### ಕರ್ವಾಲ್ ಸುದರ್ಶನ್‌ರಾವ್ ಅಮೋಘ ಸಾಧನೆ



ಟೀಮ್ ಟಿವಿಎಸ್ ಗಿರ್ಲಿಂಗ್‌ನ ಕರ್ವಾಲ್ ಸುದರ್ಶನ ರಾವ್ ಅವರು 12ನೇ ಜೆಕೆ ಟಯರ್ ಎಫ್‌ಎಂಎಸ್‌ಸಿಐ ರಾಷ್ಟ್ರೀಯ ರೇಸಿಂಗ್ ಚಾಂಪಿಯನ್‌ಶಿಪ್‌ನ ಫಾರ್ಮುಲ ಮಾರುತಿ ಸ್ವಿಫ್ಟ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಗೊಂಡಿದ್ದಾರೆ. ಮದ್ರಾಸ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಡೆದ ಅಂತಿಮ ಸುತ್ತಿನ ಬಳಿಕ ಸುದರ್ಶನ್ ಒಟ್ಟಾರೆ 80 ಅಂಕ ಗಳಿಸಿ ಪ್ರಶಸ್ತಿ ತಮ್ಮದಾಗಿಸಿಕೊಂಡರು. ಚಿತ್ರದಲ್ಲಿ ಟ್ರೋಫಿ ಜತೆ ಕರ್ವಾಲ್ ಸುದರ್ಶನ್ ರಾವ್ (ವಿವರ 5ನೇ ಪುಟದಲ್ಲಿ)

## ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)ಯ 2008-09ನೇ ಸಾಲಿನ ವಾರ್ಷಿಕ ಮಹಾಸಭೆ

### ರೂ. 4.15 ಲಕ್ಷ ನಿವ್ವಳ ಲಾಭ

ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ 2008-09ನೇ ಸಾಲಿನ ಸರ್ವಸದಸ್ಯರ ಸಭೆಯು ತಾ.20-09-2009 ರವಿವಾರ ಬೆಳಿಗ್ಗೆ ಸೊಸೈಟಿಯ ಕಚೇರಿಯಿರುವ ಭೂವರಾಹ ಸಂಕೀರ್ಣದಲ್ಲಿ ನಡೆಯಿತು. ಸೊಸೈಟಿಯ ಅಧ್ಯಕ್ಷರಾದ ಮಾರ್ಪಳ್ಳಿ ಸದಾನಂದರಾಯರ ಅಧ್ಯಕ್ಷತೆಯಲ್ಲಿ ನಡೆದ ಸಭೆ ಕು। ದೀಕ್ಷಾರವರ ಪ್ರಾರ್ಥನೆ ಯೊಂದಿಗೆ ಆರಂಭವಾಯಿತು.

ಸದಸ್ಯರನ್ನು ಆತ್ಮೀಯವಾಗಿ ಸ್ವಾಗತಿಸಿದ ಅಧ್ಯಕ್ಷರು, ಸತತವಾಗಿ 6ನೇ ವರ್ಷದಲ್ಲಿ ಲಾಭಗಳಿಸುತ್ತಾ ಹಾಗೂ ಲಾಭವನ್ನು ಹೆಚ್ಚಿಸಿಕೊಳ್ಳುತ್ತಾ ಬಂದಿರುವ ಸೊಸೈಟಿಯು ಮುಂದಿನ ವರ್ಷದಲ್ಲೂ ಲಾಭಗಳಿಸುವ ಹಾದಿಯಲ್ಲಿ ಮುನ್ನಡೆದಿದೆ. ಸೊಸೈಟಿಯ ಕಾರ್ಯನಿರತ ಬಂಡವಾಳವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸದಸ್ಯ ಬಾಂಧವರು ಪಾಲು ಬಂಡವಾಳ ಹಾಗೂ ಠೇವಣಿಗಳಲ್ಲಿ ಹಣ ತೊಡಗಿಸಿ ಸಹಕರಿಸಬೇಕು ಎಂದರು. 2009 ಏಪ್ರಿಲ್ ತಿಂಗಳಲ್ಲಿ ಉಡುಪಿ ಕುಕ್ಕಿಕಟ್ಟೆಯಲ್ಲಿ ಸಂಸ್ಥೆಯ ಪ್ರಥಮ ಶಾಖೆಯನ್ನು ತೆರೆದಿರುವ ಬಗ್ಗೆ ಪ್ರಸ್ತಾವಿಸಿ ಹೊಸ ಶಾಖೆ ತೃಪ್ತಿಕರವಾದ ಬೆಳವಣಿಗೆಯನ್ನು ದಾಖಲಿಸುತ್ತಿದೆ ಎಂದರು.

ವರದಿ ವರ್ಷದಲ್ಲಿ ಸುಮಾರು ರೂ.1.77 ಕೋಟಿ ಕಾರ್ಯನಿರತ ಬಂಡವಾಳ ಹೊಂದಿರುವ ಸಂಸ್ಥೆ 2008-09ನೇ ಸಾಲಿನಲ್ಲಿ 4.15 ಲಕ್ಷ ರೂ. ನಿವ್ವಳ ಲಾಭಗಳಿಸಿದ್ದು ಹಿಂದಿನ ವರ್ಷಕ್ಕಿಂತ ಶೇಕಡಾ 60.23ರ ಬೆಳವಣಿಗೆ ಸಾಧಿಸಿದೆ. ವರ್ಷ 2003-04ರಿಂದ ಸತತವಾಗಿ ನಿವ್ವಳ ಲಾಭ ಗಳಿಸಿರುವ ಸಂಸ್ಥೆಯ 2009-10ನೇ ಸಾಲಿನ ವ್ಯವಹಾರವು ಉತ್ತಮವಾಗಿದ್ದು ಹೆಚ್ಚಿನ ಲಾಭಗಳಿಸುವ ನಿರೀಕ್ಷೆಯಿದೆ. ಈ

(3ನೇ ಪುಟಕ್ಕೆ ...)

ನಮ್ಮ ಪ್ರೀತಿಯ ಓದುಗರಿಗೆ,
ಲೇಖಕರಿಗೆ, ಜಾಹೀರಾತುದಾರರಿಗೆ
ಎಲ್ಲಾ ಸಮಾಜ ಬಾಂಧವರಿಗೆ
**ದೀಪಾವಳಿಯ ಹಾರ್ದಿಕ ಶುಭಾಶಯಗಳು**
ಸಂಪಾದಕ ಮಂಡಳಿ, ಶ್ರೀಶಾರದಾ ಪತ್ರಿಕೆ

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್



ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.


## ಚಿಂತನ

ಸಾಮಾಜಿಕ ಜೀವಿಯಾದ ಮಾನವರು ಎಲ್ಲರ ಪ್ರೀತಿ, ಆದರ, ವಿಶ್ವಾಸಗಳನ್ನು ಪಡೆದು ಬದುಕನ್ನು ಸಾಗಿಸಬೇಕಾದುದು ಬಹಳ ಪ್ರಾಮುಖ್ಯ. ಹೀಗೆ ಬಾಳಿದವನು ಪರಮಾತ್ಮನಿಗೂ ಮೆಚ್ಚಿನ ಭಕ್ತನಾಗಿ ಆತನ ಶ್ರೇಯಸ್ಸು ಮತ್ತು ಪ್ರತಿಷ್ಠೆಗೆ ಪೂರಕ ಸನ್ನಿವೇಶಗಳನ್ನು ಕಲ್ಪಿಸಿ ಕೊಡುತ್ತಾನೆಂದು ತಿಳಿದುಕೊಳ್ಳಬೇಕು.

ಹಾಗಾದರೆ ಅಂತಹ ಸನ್ನಿವೇಶ-ಸಂದರ್ಭ ಉಂಟಾಗಲು ಮಾನವನಾದವನು ಈ ಕೆಳಗಿನ ಅಷ್ಟ ಗುಣಗಳನ್ನು ತನ್ನದಾಗಿಸಿಕೊಳ್ಳಬೇಕು.

1. **ಅಹಿಂಸೆ :** ಮನುಷ್ಯನು ಸ್ವಾರ್ಥಕ್ಕಾಗಿಯಾಗಲಿ ಅಥವಾ ಇತರರಿಗಾಗಿಯಾಗಲಿ ಯಾವುದೇ ಸಂದರ್ಭದಲ್ಲಿ ಇತರ ಯಾವುದೇ ಜೀವಿಗೆ ಕೊಡುವ ಮಾನಸಿಕ-ದೈಹಿಕ ತೊಂದರೆಗಳು ಹಿಂಸೆ ಎನಿಸಿಕೊಳ್ಳುತ್ತದೆ. ಯಾವಾತನು ಇದನ್ನು ಮಾಡುವುದಿಲ್ಲವೋ ಅದೇ ಅಹಿಂಸೆ.

2. **ಇಂದ್ರಿಯನಿಗ್ರಹ :** ಪಂಚೇಂದ್ರಿಯಗಳನ್ನು ತನ್ನ ವಶದಲ್ಲಿಟ್ಟುಕೊಂಡು, ಯಾವುದೇ ಸಂದರ್ಭದಲ್ಲಿಯೂ ಅರಿಷಡ್ವರ್ಗ (ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ)ಗಳನ್ನು ಗೆಲ್ಲುವುದೇ ಇಂದ್ರಿಯ ನಿಗ್ರಹ.

3. **ದಯಾ :** ಇತರ ಜೀವಿಗಳ ಬಗ್ಗೆ ಕರುಣೆ, ಮುಖ್ಯವಾಗಿ ಕೈಲಾಗದವರು, ವೃದ್ಧರು, ದೈಹಿಕ ವಿಕಲತೆಯಿಂದ ಬಳಲುವ ಮಾನವರ ಬಗ್ಗೆ ತೋರುವ ಸದ್ಭಾವನೆ.

4. **ಕ್ಷಮಾ :** ಒಂದು ಕೆಟ್ಟ ಸಂದರ್ಭದಲ್ಲಿ ಆತನ ಕೆಟ್ಟಗುಣಗಳಿಂದ ನಮಗೇನೋ ಕೆಡುಕು ಮಾಡಿದ ಆ ಮನುಷ್ಯನು ಮುಂದೊಂದು ದಿನ ಬಂದು ದೇಹೀ ಎಂದು ಕ್ಷಮೆ ಯಾಚಿಸಿದಾಗ ಕ್ಷಮಿಸುವ ಗುಣ.

5. **ಶಾಂತಿ :** ಯಾವುದೇ ಸಂದರ್ಭದಲ್ಲಿ ಸಿಡಿಮಿಡಿಕೊಳ್ಳದೆ, ಹೆದರದೆ, ಮಾತು ಮಾತಿಗೆ ಪ್ರತಿ ಆಡದೆ ಇರುವುದೇ ಶಾಂತಿ.

6. **ತಪ :** ತಾನು ಮಾಡಬೇಕಾದ ಸಾಧನೆಯ ಗುರಿಗಾಗಿ ಎಡೆಬಿಡದೆ ಏಕಾಗ್ರಚಿತ್ತದಿಂದ ಪ್ರಯತ್ನ ಪಡುವುದು.

7. **ಧ್ಯಾನ :** ಪರಮಾತ್ಮನೆಂಬ ಒಂದು ದಿವ್ಯ ಶಕ್ತಿ ಇದೆ. ಆತನೇ ನಮ್ಮನ್ನು ಮುನ್ನಡೆಸುವವನು ಹಾಗೂ ಮೋಕ್ಷ ಕರುಣಿಸುವವನೆಂದು ತಿಳಿದು ಆತನನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸುವುದು.

8. **ಸತ್ಯ :** ಸಮಾಜದ ಉನ್ನತಿಗಾಗಿ ಇತರರಿಗೆ ತೊಂದರೆಯಾಗದಂತೆ ನಡೆದ ಘಟನೆಯನ್ನು ಮಾತಿನ ಮೂಲಕ ಪ್ರಸ್ತುತಪಡಿಸುವುದು.

ಈ ಎಂಟು ಗುಣಗಳನ್ನು ಯಾವಾತನು ಚೆನ್ನಾಗಿ ಪಾಲಿಸುತ್ತಾನೋ ಆತನೇ ನಿಜ ಮಾನವನಾಗಿ-ದೇವರಿಗೂ ಪ್ರೀತಿ ಪಾತ್ರನಾಗುವನೆಂದು ತಿಳಿದುಕೊಳ್ಳಬೇಕು.

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಅಲ್ಲಿ ಕರುಗಳನ್ನು ಮೇಯಲುಬಿಟ್ಟು ಅವರೆಲ್ಲರೂ ತರತರದ ಆಟಗಳನ್ನಾಡಿದರು. ಈ ರೀತಿ ಭಗವಂತನು ಬಾಲವೇಷದಿಂದ ಇತರ ಮಕ್ಕಳೊಡನೆ ಆಡುವುದನ್ನು ಅಘನೆಂಬ ರಕ್ಕಸನು ಸಹಿಸಲಿಲ್ಲ. ಆ ಕಂಸನ ದಾಸನು ಪೂತನೆಯ ಮತ್ತು ಬಕಾಸುರನ ತಮ್ಮನಾಗಿದ್ದನು. ಅವನೆಷ್ಟು ಕ್ರೂರನಾಗಿದ್ದನೆಂದರೆ ದೇವತೆಗಳೂ ಅವನ ಅವಸಾನವನ್ನು ಬಯಸುತ್ತಿದ್ದರು.

ಅವನು ಕೃಷ್ಣನನ್ನು ಮಾತ್ರವಲ್ಲ ಎಲ್ಲ ಗೊಲ್ಲರ ಮಕ್ಕಳನ್ನೂ ಸಂಹರಿಸುವ ಸಂಕಲ್ಪ ಮಾಡಿದನು. ಈ ಮಕ್ಕಳು ಸತ್ತರೆ ಇಡಿ ವ್ರಜವೇ ದುಃಖದಿಂದ ನಿಸ್ಸತ್ವವಾಗುವುದು ಮತ್ತು ತಾನೇ ಸತ್ತು ಹೋಗುವುದು ಎಂಬುದೇ ಅವನ ಹುನ್ನಾರವಾಗಿತ್ತು. ಅಘಾಸುರನು ದೊಡ್ಡ ಹೆಬ್ಬಾವಾಗಿ ಬಾಲಕರು ಹೋಗುವ ದಾರಿಗೆ ಅಡ್ಡವಾಗಿ ಮಲಗಿದನು. ಅವನ ಶರೀರವು ಯೋಜನದಷ್ಟು ಉದ್ದವೂ, ಪರ್ವತದಷ್ಟು ದೊಡ್ಡದೂ ಆಗಿತ್ತು. ಅವನು ಬಾಯ್ತೆರೆದಾಗ ಅದು ಪರ್ವತದ ಒಂದು ಗುಹೆಯಂತೆ ಕಾಣುತ್ತಿತ್ತು. ಅವನ ನಾಲಿಗೆ ದೊಡ್ಡ ಬೀದಿಯಂತಿತ್ತು. ಒಳಗೆ ಗಾಢಾಂಧಕಾರ ತುಂಬಿತ್ತು. ಗೊಲ್ಲರ ಹುಡುಗರು ಒಂದೊಂದು ರೀತಿಯಿಂದ ತರ್ಕವಿತರ್ಕ ಮಾಡುತ್ತಾ ಕುತೂಹಲ ತಡೆಯಲಾರದೆ ಆ ಹೆಬ್ಬಾವಿನ ಬಾಯೊಳಗೆ ನುಗ್ಗಿದರು. ಆದರೆ ಬಾಲಕೃಷ್ಣನಿಗೆ ಅದು ರಕ್ಕಸನ ಮಾಯೆ ಎಂಬುದು ತಿಳಿಯಿತು. ಮಕ್ಕಳನ್ನು ನುಗ್ಗದಂತೆ ತಡೆಯಬೇಕೆಂದು ಅಂದುಕೊಳ್ಳುವಷ್ಟರಲ್ಲಿ ಅವರೆಲ್ಲ ಕರುಗಳ ಸಹಿತ ಒಳಗೆ ಪ್ರವೇಶಿಸಿಯಾಗಿತ್ತು. ಆದರೆ ಅಘಸುರನು ಅವರನ್ನು ನುಂಗಲಿಲ್ಲ. ಅವನು ಕೃಷ್ಣನು ಒಳಗೆ ಬರುವುದನ್ನು ಕಾಯುತ್ತಿದ್ದನು. ಭಗವಂತನು ಅವನ ಬಾಯೊಳಗೆ ಹೊಕ್ಕನು. ಆಗ ದೇವತೆಗಳೆಲ್ಲ ಭಯದಿಂದ ಹಾಹಾ ಎಂದು ಕಿರುಚಿದರು. ಕಂಸನ ಅನುಯಾಯಿಗಳಾದ ರಾಕ್ಷಸರು ಸಂತಸದಿಂದ ಕುಣಿದಾಡಿದರು.



ಅಘಸುರನು ಗೋವಳರ ಮಕ್ಕಳನ್ನೂ, ಕರುಗಳನ್ನೂ, ಕೃಷ್ಣನನ್ನೂ ನುಂಗಿಬಿಡಬೇಕೆನ್ನುವಷ್ಟರಲ್ಲಿ ಬಾಲಕೃಷ್ಣನು ಎತ್ತರಕ್ಕೆ ಬೆಳೆಯ ತೊಡಗಿದನು. ಅವನೆಷ್ಟು ಎತ್ತರ ಬೆಳೆದನೆಂದರೆ ಅಸುರನ ಗಂಟಲು ಕಟ್ಟಿ ಉಸಿರಾಡಲು ಸಾಧ್ಯವಾಗಲಿಲ್ಲ. ಉಸಿರೆಲ್ಲ ಒಳಗೆ ಸಿಕ್ಕಿಕೊಂಡು ಅವನು ಒದ್ದಾಡಿದನು. ಕೊನೆಗೆ ಅವನ ತಲೆಯನ್ನೊಡೆದುಕೊಂಡು ಅವನ ಪ್ರಾಣವು ಹೊರಟು ಹೋಯಿತು. ಬಾಲ ಮುಕುಂದನು ಗತಪ್ರಾಣರಾಗಿದ್ದ ಗೋಪ ಬಾಲಕರನ್ನು, ಕರಗಳನ್ನೂ ಕರುಣಾಮಯ ದೃಷ್ಟಿಯಿಂದ ನೋಡಿ ಪುನರುಜ್ಜೀವಿಸಿದನು. ಅವರನ್ನೆಲ್ಲ ಕರೆದುಕೊಂಡು ಅಸುರನ ಬಾಯಿಂದ ಹೊರಗೆ ಬಂದನು. ದೇವತೆಗಳೆಲ್ಲ ಹರ್ಷೋದ್ಗಾರ ಮಾಡಿದರು. ಅಘಸುರನಿಗೂ ಭಗವತ್ ಸ್ಪರ್ಶದಿಂದ ಮೋಕ್ಷ ಪ್ರಾಪ್ತವಾಯಿತು.

ಅನಂತರ ಬಾಲಗೋಪಾಲ ಮತ್ತು ಗೋಪಬಾಲರು ವೃತ್ತಾಕಾರದಲ್ಲಿ ಕುಳಿತು ತಾವು ತಂದ ಬುತ್ತಿಗಳನ್ನು ಬಿಚ್ಚಿ ವನಭೋಜನವನ್ನು ಆರಂಭಿಸಿದರು. ಬಾಲ ಸಹಜ ಮಾತುಗಳನ್ನಾಡುತ್ತಾ ಊಟ ಮಾಡಿದರು. ಎಲ್ಲ ಗೊಲ್ಲ ಬಾಲಕರು ಶ್ರೀಕೃಷ್ಣನ ಸೌಂದರ್ಯವನ್ನು ಆಸ್ವಾದಿಸುತ್ತಿದ್ದರು. ಅವರು ಹೀಗೆ ಸುಖ ಸಲ್ಲಾಪದಲ್ಲಿದ್ದಾಗ ಮೇಯುತ್ತಿದ್ದ ಕರುಗಳು ಬಹಳ ದೂರ ಹೋಗಿಬಿಟ್ಟವು. ಇದನ್ನು ಗಮನಿಸಿದ ಕೆಲವು ಮಕ್ಕಳು ತಾವು ಕರುಗಳನ್ನು ಹುಡುಕಿ ತರುವುದಾಗಿ ಹೇಳಿ ಊಟ ಬಿಟ್ಟೆದ್ದರು. ಆಗ ಕೃಷ್ಣಕುಮಾರನು ತಾನೇ ಕರುಗಳನ್ನು ಹುಡುಕಿ ತರುವುದಾಗಿಯೂ, ಮಿಕ್ಕವರು ಊಟ ಮಾಡುತ್ತಿರಬೇಕೆಂದೂ ಹೇಳಿ ಹೊರಟು ಹೋದನು. ಆಗ ಬ್ರಹ್ಮದೇವನು ಶ್ರೀಕೃಷ್ಣನ ಬಾಲಲೀಲೆಗಳನ್ನು ನೋಡಲು ಬಂದವನು ಅವನ ಮಾಯೆಯನ್ನು ಪರೀಕ್ಷಿಸುವುದಕ್ಕಾಗಿ ಕರುಗಳನ್ನು ಎಲ್ಲೋ ಒಂದು ಕಡೆ ಅಡಗಿಸಿಟ್ಟು ಅವುಗಳು ಮಾಯಾನಿದ್ರೆಯಲ್ಲಿರುವಂತೆ ಮಾಡಿದನು. ನಂದಕಂದನು ಎಷ್ಟು ಹುಡುಕಿದರೂ ಕರುಗಳು ಕಾಣಿಸಲಿಲ್ಲ. ಈ ಕಡೆ ಗೊಲ್ಲರ ಮಕ್ಕಳನ್ನು ಬಚ್ಚಿಟ್ಟ ಬ್ರಹ್ಮನು ಅವರನ್ನು ನಿದ್ರಾಧೀನರನ್ನಾಗಿ ಮಾಡಿದನು. ಕೃಷ್ಣನು ಹಿಂದಕ್ಕೆ ಬಂದಾಗ ಗೆಳೆಯರು ಕಾಣೆಯಾಗಿದ್ದರು. ಆಗ ಭಗವಂತನು ಅಂತರ್ದೃಷ್ಟಿಯಿಂದ ನೋಡಿದಾಗ ಬ್ರಹ್ಮನ ಕುಚೋದ್ಯ ತಿಳಿಯಿತು. ಬ್ರಹ್ಮನಿಗೆ ಬುದ್ಧಿಕಲಿಸಬೇಕೆಂದು ನಿಶ್ಚಯಿಸಿ ತಾನೇ ಅಷ್ಟು ಕರುಗಳ ಮತ್ತು ಗೊಲ್ಲ ಬಾಲಕರ ರೂಪವನ್ನು ತಾಳಿದನು. ಸಾಯಂಕಾಲ ಕರುಗಳೂ, ಗೋವಳ ಹುಡುಗರೂ ತಂತಮ್ಮ ಮನೆಗಳಿಗೆ ಹೋದರು. ಹಸುಗಳಿಗಾಗಲೀ ಗೋಪಿಯರಿಗಾಗಲೀ ಬಂದದ್ದು ಮಾಯಾ ರೂಪದ ಕೃಷ್ಣನೆಂಬುದು ತಿಳಿಯಲೇ ಇಲ್ಲ. ಹಸುಗಳು ಕರುಗಳ ರೂಪದ ಕೃಷ್ಣನನ್ನು ಹೆಚ್ಚು ಅಕ್ಕರೆಯಿಂದ, ಗೋಪಿಯರು ಗೋಪಕುಮಾರರನ್ನು ಹೆಚ್ಚು ಪ್ರೇಮದಿಂದ ಲಾಲಿಸಲಾರಂಭಿಸಿದರು. ಹೀಗೆ ಒಂದು ವರ್ಷ ಕಳೆಯಿತು. ಬ್ರಹ್ಮನು (ಅವನ ಲೆಕ್ಕದಲ್ಲಿ ಒಂದು ತ್ರುಟಿಯುಷ್ಟು ಕಾಲ) ಹಿಂದಕ್ಕೆ ಬಂದು ಏನು ನಡೆಯಿತೆಂದು ನೋಡಿದನು. ತಾನು ಬಚ್ಚಿಟ್ಟಿದ್ದ ಕರುಗಳು ಮತ್ತು ಬಾಲಗೊಪಾಲರು ಇನ್ನೂ ನಿದ್ದೆಯಲ್ಲೇ ಇದ್ದರು. ವೃಂದಾವನದಲ್ಲಿ ಓಡಾಡುತ್ತಿರುವ ಕರುಗಳು, ಗೊಲ್ಲರ ಮಕ್ಕಳು ಯಾರೆಂದು ತಿಳಿಯದೆ ಗೊಂದಲದಲ್ಲಿ ಬಿದ್ದನು. ಆಗ ಬಾಲಕೃಷ್ಣನು ತನ್ನ ಮಾಯೆಯನ್ನು ಉಪಸಂಹರಿಸಿದನು. ಇದನ್ನು ಕಂಡು ಭಗವಂತನ ಅಪಾರ ಮಾಯಾಶಕ್ತಿಯನ್ನು ಅರ್ಥ ಮಾಡಿಕೊಂಡ ಬ್ರಹ್ಮನು ಕೃಷ್ಣನಿಗೆ ಸಾಷ್ಟಾಂಗ ನಮಸ್ಕರಿಸಿ, ಸ್ತುತಿಸಿ, ಕರುಗಳನ್ನೂ, ಗೊಲ್ಲರ ಹುಡುಗರನ್ನು ನಿದ್ದೆಯಿಂದೆಬ್ಬಿಸಿ ತನ್ನ ಲೋಕಕ್ಕೆ ಹೊರಟು ಹೋದನು.

ರಾಮ, ಕೃಷ್ಣರು ಇನ್ನೂ ಸ್ವಲ್ಪ ದೊಡ್ಡವರಾದರು. ಆಗ ಅವರಿಗೆ ಕರುಗಳ ಜೊತೆಯಲ್ಲಿ ಹಸುಗಳನ್ನು ಮೇಯಿಸುವ ಶಕ್ತಿ ಬಂತು.

(ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

**ಪೀತ್ವಾ ಕರ್ದಮಪಾನೀಯಂ**
**ಭೇಕೋ ರಟರಟಾಯತೇ ।**
**ಪಕ್ವಂ ಚೂತರಸಂ ಪೀತ್ವಾ**
**ಗರ್ವಂ ನಾಯಾತಿ ಕೋಕಿಲಃ ॥**

ಅಂದರೆ ಕೊಚ್ಚೆ ನೀರನ್ನು ಕುಡಿದೂ ಕಪ್ಪೆಯು ರಟರಟ ಎಂದು ವಟಗುಟ್ಟುತ್ತದೆ. ಆದರೆ ಸೊಗಸಾಗಿ ಮಾಗಿದ ಮಾವಿನ ರಸವನ್ನು ಕುಡಿದೂ ಕೋಗಿಲೆಯು ಮಾತ್ರ ಗರ್ವ ಪಡುವುದಿಲ್ಲ.

**ಪುಸ್ತಕ ಪರಿಚಯ :**

**'ಅನಿಕೇತನ' (ಪುನರ್ಜನ್ಮ ಕುರಿತ ಕೃತಿ)**
**ಲೇಖಕರು : ಡಾ। ವೈ. ಚಂದ್ರಶೇಖರ ರಾವ್**

ಡಾ। ವೈ. ಚಂದ್ರಶೇಖರ ರಾವ್‌ರವರು ದಿ। ಎಲ್ಲೂರು ಲಕ್ಷ್ಮೀನಾರಾಯಣ ಜ್ಯೋತಿಷ್ಕರ ಸುಪುತ್ರರಾಗಿ ತಾ.08-08-1938ರಲ್ಲಿ ಉಡುಪಿ ತಾಲೂಕಿನ ಸಣ್ಣಹಳ್ಳಿಯಾದ ಎಲ್ಲೂರಿನಲ್ಲಿ ಜನಿಸಿದರು. ತಾಯಿ ಗಿರಿಜಮ್ಮ. ಮೈಸೂರಿನ ಗವರ್ನ್‌ಮೆಂಟ್ ಕಾಲೇಜ್ ಆಫ್ ಇಂಡಿಯನ್ ಮೆಡಿಸಿನ್‌ನಲ್ಲಿ ಜಿ.ಸಿ.ಐ.ಎಂ. ಪದವಿ ಪಡೆದರು. ಅವಿಭಾಜಿತ ದ.ಕ.ಜಿಲ್ಲೆಯ ವಿವಿಧ ಸರಕಾರಿ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲಿಸಿದರು. ಓದು ಮತ್ತು ಬರೆವಣಿಗೆ ಇವರ ಹವ್ಯಾಸ. ಕವನ, ಮಕ್ಕಳ ಕಥೆ, ವೈದ್ಯಕೀಯ ಲೇಖನಗಳು ಹಾಗೂ ಅನೇಕ ಆಧ್ಯಾತ್ಮಿಕ ಲೇಖನಗಳನ್ನು ಅವರು ಬರೆದಿದ್ದಾರೆ. ಶ್ರೀಶಾರದಾ ಪತ್ರಿಕೆಗೆ ನಿರಂತರ ವಾಗಿ ಲೇಖನಗಳನ್ನು ನೀಡಿ ಪ್ರೋತ್ಸಾಹಿಸಿ ದ್ದಾರೆ. ಅವರು ಶ್ರೀ ಎಲ್ಲೂರು ಲಕ್ಷ್ಮೀ ನಾರಾಯಣ ಜ್ಯೋತಿಷ್ಯ ಮೆಮೋರಿಯಲ್ ಚ್ಯಾರಿಟೇಬಲ್ ಟ್ರಸ್ಟಿನ ಸ್ಥಾಪಕ ಟ್ರಸ್ಟಿ ಆಗಿದ್ದರು. ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಹಾಗೂ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಉಡುಪಿ ಇದರ ನಿರ್ದೇಶಕರಾಗಿಯೂ ಸೇವೆ ಸಲಿಸಿದರು. ಶ್ರೀಯುತರು 2008ನೇ ಇಸವಿ ಜುಲೈ 16ರಂದು ದೈವಾಧೀನರಾದರು. ಅವರ ಸುಪುತ್ರ ಉಡುಪಿಯ ಖ್ಯಾತ ಶಸ್ತ್ರಚಿಕಿತ್ಸಾ ವೈದ್ಯರಾದ ಡಾ। ಸುದರ್ಶನ್‌ರಾವ್ ಅವರು ತಮ್ಮ 'ಅನಿಕೇತನ' ನೂತನ ಗೃಹಪ್ರವೇಶದ ಸಂದರ್ಭದಲ್ಲಿ ಈ ಮಹತ್ತರ ಕೃತಿಯನ್ನು ಟ್ರಸ್ಟಿನ ಪ್ರಕಾಶನದಲ್ಲಿ ಲೋಕಾರ್ಪಣೆ ಗೊಳಿಸಿದ್ದಾರೆ.

ಓದುವ ಮುನ್ನ... ಇಲ್ಲಿ ಪ್ರಕಾಶಕರು ತಿಳಿಸಿದಂತೆ - "ಓ ನನ್ನ ಚೇತನಾ ಆಗು ನೀ ಅನಿಕೇತನಾ" ಇದು ರಾಷ್ಟ್ರಕವಿ ಕುವೆಂಪುರವರ ಹೃದಯಸ್ಪರ್ಶೀ ಸಾಲುಗಳು. ಆಧ್ಯಾತ್ಮದ ಹಾದಿಯಲ್ಲಿ ಸಾಧಕನ ಗುರಿ ಹುಟ್ಟು ಸಾವುಗಳಿಲ್ಲದ ಅಮರತ್ವವನ್ನು ಪಡೆಯುವುದು. ಅಂದರೆ ಅನಂತನಲ್ಲಿ ಲೀನವಾಗುವುದು. ಅಮರತ್ವವನ್ನು ಪಡೆಯುವ ಪ್ರಯತ್ನದಲ್ಲಿ ಹುಟ್ಟಿನಿಂದ ಆರಂಭಗೊಂಡು ಮರಣದಲ್ಲಿ ಕೊನೆಯಾಗುವ ಒಂದೊಂದು ಜನ್ಮವೂ, ಒಂದೊಂದು ಯಶಸಿನ ಮೆಟ್ಟಿಲುಗಳು. ಸಾಧಕನು ಪ್ರಯತ್ನಿಸಿದರೆ ಮುಂದಿನ ಜನ್ಮದಲ್ಲಿ ಸಿಗಬಹುದಾದ ಅಮರತ್ವ ಈ ಜನ್ಮದಲ್ಲೇ ಪಡೆಯಬಹುದು. ಇದು ಪುನರ್ಜನ್ಮಕ್ಕೂ, ಅಮರತ್ವಕ್ಕೂ ಇರುವ ನಂಟು....

ಈ ಪುಸ್ತಕದಲ್ಲಿ ಲೇಖಕರು ಸ್ಥೂಲ ಶರೀರವೆಂದರೇನು, ಅದರೊಳಗಿನ ಸೂಕ್ಷ್ಮ ಶರೀರವೆಂದರೇನು ಹಾಗೂ ಅದನ್ನು ಮುನ್ನಡೆಸುತ್ತಿರುವ ಶಕ್ತಿ (ಆತ್ಮ)ಗಳೆಲ್ಲವನ್ನೂ ಸಾಮಾನ್ಯರಿಗೂ ಅರ್ಥವಾಗುವಂತೆ ವರ್ಣಿಸಿದ್ದಾರೆ. ಎಲ್ಲಕ್ಕೂ ಮುಖ್ಯವಾಗಿ ಸ್ಥೂಲ ಶರೀರವು ನಾಶ (ಮರಣ) ವಾದ ನಂತರ ಆತ್ಮನು ಇನ್ನೊಂದು ಗರ್ಭಾವಸ್ಥೆಯಲ್ಲಿರುವ ದೇಹವನ್ನು ಪ್ರವೇಶಿಸಿ ಪುನರ್ಜನ್ಮ ಪಡೆಯಬಹುದಾದ ಸಂಭವನೀಯತೆಗಳನ್ನು ತರ್ಕಿಸಿದ್ದಾರೆ. ಅದಕ್ಕೆ ಆಧಾರವಾಗಿ ವೈದ್ಯಕೀಯ, ಆಯುರ್ವೇದ, ಉಪನಿಷತ್ತು ಹಾಗೂ ಭಗವದ್ಗೀತೆಯ ಸಾಲುಗಳನ್ನು ಬಳಸಿದ್ದಾರೆ"

ಲೇಖಕರು ಕೊನೆಯಲ್ಲಿ ತಿಳಿಸಿದಂತೆ "ಈ ಆತ್ಮನು ಬದುಕಿರುವ ಶಕ್ತಿ, ಚೇತನ. ಆದುದರಿಂದ ಶಕ್ತಿಗೆ ನಾಶವಿಲ್ಲ ಎನ್ನುವ ಸಿದ್ಧಾಂತದಂತೆ ಈ ಆತ್ಮನಿಗೂ ನಾಶವಿಲ್ಲ. ನಾಶವಿಲ್ಲದ ಈ ಶಕ್ತಿ ದೇಹ ನಾಶವಾದ ಮೇಲೆ ಏನಾಗುತ್ತದೆ? ಹೊಸ ಶರೀರವನ್ನು ಸೇರಿ ಪುನರ್ಜನ್ಮವಾಗುತ್ತದೆ ಎನ್ನುವುದೇ ಹೆಚ್ಚು ಸಾಧ್ಯತೆ ಅಲ್ಲವೆ?

ಸಾಧ್ಯಾಸಾಧ್ಯತೆಗಳನ್ನು ನೀವೇ ತರ್ಕಿಸಬಹುದು. ಒಂದು ಭೌತಿಕವಾದ ಮನೆಯಂತೆಯೇ ನಾವು ಇದ್ದೇವೆಯೇ? ನಮ್ಮ ಶರೀರ ಮನೆಯಂತಿದೆ ನಿಜ. ಅದರೊಳಗೆ ಯಜಮಾನ ಇರಬೇಡವೇ?"

ಎಲ್ಲರಿಗೂ ಮಾರ್ಗದರ್ಶಿಯಾಗುವ ಈ ಪುಸ್ತಕವು ಕುತೂಹಲವನ್ನು ಉಂಟುಮಾಡುತ್ತದೆ. ಇದು ಎಲ್ಲರೂ ಓದಲೇ ಬೇಕಾದ ಕೃತಿ.

ಈ ಪುಸ್ತಕವನ್ನು ಆಸಕ್ತರಿಗೆ ಉಚಿತವಾಗಿ ನೀಡಲಾಗುವುದೆಂದು ಪ್ರಕಾಶಕರು ತಿಳಿಸಿದ್ದು ರೂ.10/-ರ ಅಂಚೆಯನ್ನು ಒಳಗೊಂಡ ಸ್ವ-ವಿಳಾಸದ ಲಕೋಟೆಯನ್ನು ಇಟ್ಟು ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ವಿಳಾಸ :ಡಾ। ವೈ. ಸುದರ್ಶನ್‌ರಾವ್, ಕೆನರಾ ಹೆಲ್ತ್ ಕ್ಲಿನಿಕ್, ಅಂಜುಮಾನ್ ರಸ್ತೆ, ಸಿಟಿಸ್ಟ್ಯಾಂಡ್ ಬಳಿ, ಉಡುಪಿ.

ಪ್ರಕಾಶಕರು : ಶ್ರೀ ಎಲ್ಲೂರು ಲಕ್ಷ್ಮೀ ನಾರಾಯಣ ರಾವ್ ಜ್ಯೋತಿಷ್ಯ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್, ಕುಕ್ಕಿಕಟ್ಟೆ, ಉಡುಪಿ.

– ವೈ. ಮೋಹನ ರಾವ್.


**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ

## ಸಂಭ್ರಮದ ನವರಾತ್ರಿ ಉತ್ಸವ-ಮನಸೆಳೆದ ಯಕ್ಷಗಾನ

(...1ನೇ ಪುಟದಿಂದ)

ಕ್ರಿಯೆಗಳು ನಡೆಯುತ್ತಿದ್ದಂತೆ ಮಹಿಳಾ ವೇದಿಕೆಯ ಸದಸ್ಯರು ಹಾಗೂ ಪರಿಸರದ ವನಿತೆಯರು ಲಲಿತಾ ಸಹಸ್ರನಾಮ ಪಠಣ ನಡೆಸಿದರು. ಪೂರ್ವಾಹ್ನ 7-30 ಗಂಟೆಗೆ ಆರಂಭವಾದ ಚಂಡಿಕಾಯಾಗ ಮಧ್ಯಾಹ್ನ 12ರ ಹೊತ್ತಿಗೆ ಪೂರ್ಣಾಹುತಿಯೊಂದಿಗೆ ಸಂಪನ್ನ ಗೊಂಡಿತು.

**ಸಾಂಸ್ಕೃತಿಕ ಸ್ಪರ್ಧೆಗಳು :**

ವಿಜಯದಶಮಿಯಂದು ಈ ಹಿಂದೆ ನಡೆದುಕೊಂಡು ಬಂದಂತೆ ಈ ವರ್ಷವೂ ನಮ್ಮ ಸಮಾಜದ ಎಲ್ಲಾ ವರ್ಗದ ಜನರಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು. ವಿದ್ಯಾರ್ಥಿಗಳಿಗೆ ರಂಗೋಲಿ, ಭಕ್ತಿಗೀತೆ, ಚಿತ್ರ ರಚನೆ, ಕಂಠಪಾಠ ಸ್ಪರ್ಧೆ ಮತ್ತು ಛದ್ಮವೇಷ ಸ್ಪರ್ಧೆಗಳನ್ನು, ಮಹಿಳೆಯರಿಗೆ ಹೂಕಟ್ಟುವ ಸ್ಪರ್ಧೆಯನ್ನು, ಪುರುಷರು ಮತ್ತು ಮಹಿಳೆಯರಿಗೆ ಚೂರ್ಣಿಕೆ ಹೇಳುವ ಸ್ಪರ್ಧೆಯನ್ನು ನಡೆಸಲಾಯಿತು. ಯುವ ವೇದಿಕೆ ಮತ್ತು ಮಹಿಳಾ ವೇದಿಕೆಯ ಸದಸ್ಯರು ವಿವಿಧ ಸ್ಪರ್ಧೆಗಳನ್ನು ಯಶಸ್ವಿಯಾಗಿ ಸಂಯೋಜಿಸಿದ್ದರು.

ಇದೇ ಸಂದರ್ಭದಲ್ಲಿ ಮಹಿಳಾ ವೇದಿಕೆಯವರು ಶ್ರೀಶಾರದಾ ಮಾತೆಗೆ ಅಲಂಕರಿಸಿದ್ದ ಸೀರೆಗಳನ್ನು ಮಾರಾಟ ಮಾಡಿದರು.

**ಉಚಿತ ವೈದ್ಯಕೀಯ ತಪಾಸಣಾ ಶಿಬಿರ**

ಕಳೆದ ವರ್ಷದಂತೆಯೇ ಈ ವರ್ಷವೂ ಡಾ| ಜಿ.ಎಸ್. ಚಂದ್ರಶೇಖರ್‌ರವರ ಆದರ್ಶ್ ಆಸ್ಪತ್ರೆ ಮತ್ತು ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಟ್ರಸ್ಟ್ ವತಿಯಿಂದ ಉಚಿತ ರಕ್ತದೊತ್ತಡ ಡಯಾಬಿಟಿಸ್, ಇಸಿಜಿ ಮತ್ತು ಕೊಲೆಸ್ಟ್ರಾಲ್‌ಗಳ ತಪಾಸಣಾ ಶಿಬಿರ ನಡೆಯಿತು.

**ಬಹುಮಾನ ವಿತರಣೆ - ಉದಯ ಚಂದ್ರ ಪ್ರತಿಭಾ ಪುರಸ್ಕಾರ :**

ಭೋಜನಾನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ವಿಜಯದಶಮಿ ಪ್ರಯುಕ್ತ ನಮ್ಮ ಸಮಾಜದ ವಿದ್ಯಾರ್ಥಿಗಳು ಮತ್ತು ಹಿರಿಯರಿಗಾಗಿ ಏರ್ಪಡಿಸಿದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ ಹಾಗೂ ಉದಯಚಂದ್ರ ಪ್ರತಿಭಾ ಪುರಸ್ಕಾರ ವಿಜೇತರಿಗೆ ಪುರಸ್ಕಾರ ನೀಡಲಾಯಿತು. ಹಿಂದೆ ನಮ್ಮ ಸಂಘದ ಅಧ್ಯಕ್ಷರಾಗಿದ್ದ ಹಾಗೂ ಪ್ರಸಕ್ತ ಸಂಘದ ಸಲಹೆಗಾರರಾಗಿರುವ ಡಾ| ಪಿ. ವಿಠಲರಾವ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಉಪಾಧ್ಯಕ್ಷರಾದ ಶ್ರೀ ಎಸ್. ಎಮ್. ರಾವ್ ಹಾಗೂ ಖಜಾಂಚಿಯವರಾದ ಶ್ರೀ ಎಮ್. ಸದಾನಂದರಾಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಂಘದ ಕಾರ್ಯದರ್ಶಿ ಶ್ರೀ ಕೆ. ವೇಣುಗೋಪಾಲರಾವ್ ಮುಖ್ಯ ಅತಿಥಿಗಳನ್ನು ಸಭಿಕರಿಗೆ ಪರಿಚಯಿಸಿ ಸ್ವಾಗತಿಸಿದರು. ಡಾ| ಪಿ. ವಿಠಲರಾವ್ ಮಾತನಾಡಿ-ವಿದ್ಯಾರ್ಥಿಗಳು ಪ್ರಸಕ್ತ ಉದ್ಯೋಗ ಸನ್ನಿವೇಶಗಳನ್ನು ಗಮನದಲ್ಲಿರಿಸಿಕೊಂಡು ನಿರ್ದಿಷ್ಟ ವಿಷಯಗಳ ಬಗ್ಗೆ ಹೆಚ್ಚಿನ ಪ್ರೌಢಿಮೆಯನ್ನು ಗಳಿಸಿಕೊಂಡು ಸ್ಪರ್ಧಾತ್ಮಕ ಜಗತ್ತಿಗೆ ಪಾದಾರ್ಪಣೆ ಮಾಡಲು ತಮ್ಮನ್ನು ಸಮರ್ಥವಾಗಿ ರೂಪಿಸಿಕೊಳ್ಳಬೇಕಾಗಿದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ವಿವಿಧ ಸಂಘ-ಸಂಸ್ಥೆಗಳು ಹಾಗೂ ಉದಾರ ಹೃದಯದ ಸಂಪನ್ನ ವ್ಯಕ್ತಿಗಳು ವಿದ್ಯಾಭ್ಯಾಸಕ್ಕೆ ನೀಡುತ್ತಿರುವ ಪ್ರೋತ್ಸಾಹವನ್ನು ಬಳಸಿ ಸದುಪಯೋಗ ಮಾಡಿಕೊಂಡು ಮುಂದೆ ಸಮಾಜದ ನೆರವಿಗೆ ಬರುವಂತಾಗಬೇಕೆಂದು ಹಾರೈಸಿದರು. ಉದಯಚಂದ್ರ ಪ್ರತಿಭಾ ಪುರಸ್ಕೃತರಿಗೆ ಪುರಸ್ಕಾರ ನೀಡಿ ಗೌರವಿಸಿದರು. ಅಲ್ಲದೆ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನವನ್ನು ವಿತರಿಸಿದರು. ಬಹುಮಾನ ವಿತರಣೆಯಲ್ಲಿ ಸಂಘದ ಉಪಾಧ್ಯಕ್ಷ ಶ್ರೀ ಎಸ್. ಎಮ್.ರಾಯರು ಪಾಲ್ಗೊಂಡರು. ಬಹುಮಾನ ವಿಜೇತರ ಹೆಸರುಗಳನ್ನು ಶ್ರೀ ಯು. ಅರವಿಂದ ಕುಮಾರ್ ವಾಚಿಸಿದರು. ಕೊನೆಯಲ್ಲಿ ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು ಧನ್ಯವಾದ ಸಲ್ಲಿಸಿದರು. ವೇಣುಗೋಪಾಲರಾವ್ ಕಾರ್ಯಕ್ರಮ ನಿರೂಪಿಸಿದರು.

**ಉದಯಚಂದ್ರ ಪ್ರತಿಭಾ ಪುರಸ್ಕೃತರು :**

1) **ಕು| ಚೈತ್ರ, ಪರ್ಕಳ** (SSLC) 2) **ಶ್ರೀ ಅಭಿಲಾಷ್ ವಿ., ಕಾರ್ಕಳ** (PUC)

**ವಿವಿಧ ಸ್ಪರ್ಧೆಗಳ ವಿಜೇತರು :**

ಕಂಠಪಾಠ ಸ್ಪರ್ಧೆ (7ನೇ ತರಗತಿ ವರೆಗೆ) 1) ಅನುಶ್ರೀ 2) ಸ್ವಾತಿ ರಾವ್ 3) ಶಮಾತ್ಮಿಕ ರಾವ್

ಕಂಠಪಾಠ ಸ್ಪರ್ಧೆ (8ನೇ ತರಗತಿ ಮೇಲ್ಪಟ್ಟು) : 1) ರಕ್ಷಿತಾ

ಭಕ್ತಿಗೀತೆ ಸ್ಪರ್ಧೆಗಳು : (4ನೇ ತರಗತಿ ವರೆಗೆ) 1) ವಂದನಾರಾವ್ ಕೆ. 2) ಲಹರಿ ರಾವ್ 3) ಸುದೇಷ್ಣ ರಾವ್

ಭಕ್ತಿಗೀತೆ ಸ್ಪರ್ಧೆಗಳು : (5 ರಿಂದ 7 ತರಗತಿ ವರೆಗೆ) 1) ಶ್ರವಣ ಕುಮಾರ್ 2) ಅಶ್ವಿನಿ ಡಿ. ಹೆಬ್ಬಾರ್ 3) ಧನಶ್ರೀ ರಾವ್

ಭಕ್ತಿಗೀತೆ ಸ್ಪರ್ಧೆಗಳು : (8ನೇ ತರಗತಿ ಮೇಲ್ಪಟ್ಟು) 1) ಪಲ್ಲವಿ ರಾವ್ ಕೆ. 2) ರಕ್ಷಿತಾ 3) ಪವನ್ ರಾವ್

ಹೂಮಾಲೆ ಕಟ್ಟುವುದು : 1) ಡಾ| ಶೋಭಾ ಆರ್. ರಾವ್ 2) ಶ್ರೀಮತಿ ವಾಣಿ ರವೀಂದ್ರ ಭಂಡಿ 3) ಶ್ರೀಮತಿ ಗಾಯತ್ರಿ ಶಾಸ್ತ್ರೀ

ರಂಗವಲ್ಲಿ (4ನೇ ತರಗತಿ ವರೆಗೆ) : 1) ಸಿಂಚನ ರಾವ್ 2) ಸುದೇಶ್ನ ರಾವ್ 3) ಅನುಷಾ ಪಿ. ಭಟ್



ಜಾಂಬವತಿ ಕಲ್ಯಾಣ - ಎಳೆಯ ಮಕ್ಕಳಾದಿಯಾಗಿ ಹವ್ಯಾಸಿ ಕಲಾವಿದರನ್ನು ಯಕ್ಷಗಾನ ಬಯಲಾಟಕ್ಕೆ ತರಬೇತಿ ನೀಡಿ ಸಿದ್ಧಗೊಳಿಸಿದ ಉಡುಪಿ ಯಕ್ಷಗಾನ ಕೇಂದ್ರದ ಗುರು ಮಂಜುನಾಥ ಕುಲಾಲ್ ಅವರಿಗೆ ಸನ್ಮಾನ-ಶ್ರೀ ನೀಲಾವರ ಲಕ್ಷ್ಮೀನಾರಾಯಣರಾವ್‌ರವರಿಂದ. ಕುಲಾಲ್‌ರವರ ಸಾಧನೆ ಹಾಗೂ ಪ್ರತಿಭೆಯ ಸಂಕ್ಷಿಪ್ತ ಪರಿಚಯನ್ನು ಕೆ. ವೇಣುಗೋಪಾಲ್‌ರಾವ್ ನೀಡಿದರು. ಎಳೆಯ ಮಕ್ಕಳು ಸೇರಿದಂತೆ ಎಲ್ಲಾ ಕಲಾವಿದರು ಕುಲಾಲ್‌ರವರಿಂದ ಆಶೀರ್ವಾದ ಪಡೆದರು.

ರಂಗವಲ್ಲಿ (5 ರಿಂದ 7 ತರಗತಿ ವರೆಗೆ) : 1) ರಂಜಿತ್ ಕುಮಾರ್ 2) ಕವನ ರಾವ್ 3) ಶಮಾತ್ಮಿಕ

ರಂಗವಲ್ಲಿ (8ನೇ ತರಗತಿ ನಂತರ) : 1) ಭಾಗ್ಯಶ್ರೀ ರಾವ್ 2) ವಿಜೇತ ರಾವ್ 3) ಪಲ್ಲವಿ ರಾವ್ ಕೆ.

ಚೂರ್ಣಿಕ ಹೇಳುವುದು : 1) ಶ್ರವಣ ಕುಮಾರ್ 2) ಅಶ್ವಿನಿ ಶಾಸ್ತ್ರಿ 3) ರಕ್ಷಿತ

ಚಿತ್ರಕಲೆ (4ನೇ ತರಗತಿ ವರೆಗೆ): 1) ಸಿಂಚನ ರಾವ್ 2) ಸ್ವಾತಿ ರಾವ್ 3) ಸುದೇಷ್ಣ ರಾವ್

ಚಿತ್ರಕಲೆ (5 ರಿಂದ 7ನೇ ತರಗತಿ ವರೆಗೆ) : 1) ವೈಷ್ಣವಿ ಹೆಬ್ಬಾರ್ 2) ಅನುಜ ಶ್ಯಾನುಭಾಗ್ 3) ಅನುಶ್ರೀ

ಚಿತ್ರಕಲೆ (8ನೇ ತರಗತಿ ನಂತರ) : 1) ಸೌರವ್ ಕೆ. ಶಾಸ್ತ್ರಿ 2) ಅಶ್ವಿನಿ ಶಾಸ್ತ್ರಿ 3) ವರುಣ್‌ರಾವ್ ಕೆ.

ಛದ್ಮವೇಷ ಸ್ಪರ್ಧೆ (4ನೇ ತರಗತಿ ವರೆಗೆ) : 1) ಸ್ವಾತಿ ರಾವ್ 2) ರೋಹನ್ ರಾವ್ 3) ಅನನ್ಯ ಶಾಸ್ತ್ರಿ

ಛದ್ಮವೇಷ ಸ್ಪರ್ಧೆ (5 ರಿಂದ 7ನೇ ತರಗತಿ) : 1) ಶ್ರವಣ ಕುಮಾರ್ 2) ಅಭಿಷೇಕ್ ಶಾಸ್ತ್ರಿ

ಛದ್ಮವೇಷ ಸ್ಪರ್ಧೆ (8-10ನೇ ತರಗತಿ) : 1) ಅಶ್ವಿನಿ ಶಾಸ್ತ್ರಿ 2) ಸೌರವ್ ಶಾಸ್ತ್ರಿ

**ಜಾಂಬವತಿ ಕಲ್ಯಾಣ :**

ಕುಂಜಿಬೆಟ್ಟು ಶ್ರೀಶಾರದಾ ಮಂಟಪದ ಹವ್ಯಾಸಿ ಯಕ್ಷಗಾನ ಕಲಾವಿದರ ಕೂಡುವಿಕೆಯಿಂದ 'ಜಾಂಬವತಿ ಕಲ್ಯಾಣ' ಯಕ್ಷಗಾನ ಬಯಲಾಟವು ಈ ಹವ್ಯಾಸಿ ಬಳಗದ ಎರಡನೇ ಕಾಣಿಕೆಯಾಗಿ ಯಶಸ್ವಿಯಾಗಿ ಅಭಿನಯಿಸಲ್ಪಟ್ಟು ನೆರೆದ ಕಲಾಭಿಮಾನಿಗಳ ತುಂಬು ಹೃದಯದ ಪ್ರಶಂಸೆಗೆ ಪಾತ್ರವಾಯಿತು. ಪ್ರದರ್ಶನಕ್ಕೆ ಮುನ್ನ ಈ ಕಲಾವಿದರ ಬಳಗವನ್ನು ತರಬೇತಿ ನೀಡಿ ಸಿದ್ಧಪಡಿಸಿದ ಉಡುಪಿ ಯಕ್ಷಗಾನ ಕೇಂದ್ರದ ಗುರು ಶ್ರೀ ಮಂಜುನಾಥ ಕುಲಾಲ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಉಡುಪಿ ಯಕ್ಷಗಾನ ಕೇಂದ್ರದ ಪ್ರಾಂಶುಪಾಲರಾಗಿದ್ದ ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾಯರು ಶ್ರೀ ಮಂಜುನಾಥ ಕುಲಾಲರನ್ನು ಸನ್ಮಾನಿಸಿದರು.

## ....ರೂ. 4.15 ಲಕ್ಷ ನಿವ್ವಳ ಲಾಭ

(...1ನೇ ಪುಟದಿಂದ)

ಸರ್ವಾಂಗೀಣ ಅಭಿವೃದ್ಧಿಗೆ ಸಹಕರಿಸಿದ ಸದಸ್ಯ ಬಾಂಧವರಿಗೆ ಹೃತ್ಪೂರ್ವಕವಾದ ಕೃತಜ್ಞತೆ ಗಳು ಎಂದರು.

2008-09ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು. ನಂತರ 2008-09ನೇ ಸಾಲಿನ ಅಪರಿಶೋಧಿತ ಲಾಭ-ನಷ್ಟದ ತಃಖ್ತೆ ಹಾಗೂ ಆಸ್ತಿ-ಜವಾಬ್ದಾರಿ ತಃಖ್ತೆಗಳನ್ನು ಕಾರ್ಯದರ್ಶಿ ಕೆ. ವೇಣುಗೋಪಾಲರಾವ್ ರವರು ಸಭೆಯ ಮುಂದಿಟ್ಟರು. ತಃಖ್ತೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿದ ಸಭೆಯು ಹಲವು ವಿಷಯಗಳಿಗೆ ಸಮಾಧಾನಕರ ವಿವರಣೆಗಳನ್ನು ಪಡೆದು ತನ್ನ ಅಂಗೀಕಾರವನ್ನು ನೀಡಿತು. 2009-10ನೇ ಸಾಲಿನ ಅಂದಾಜು ಆಯವ್ಯಯ ತಃಖ್ತೆಯನ್ನು ಸಭೆಯು ಅನುಮೋದಿಸಿತು. ಇಲಾಖೆಯಿಂದ ಲೆಕ್ಕ ಪರಿಶೋಧನೆಯಾದ ನಂತರ 2008-09ನೇ ಸಾಲಿನಲ್ಲಿ ಸೊಸೈಟಿಯ ಪ್ರಾಥಮಿಕ ಸದಸ್ಯರಿಗೆ 10 ಶೇಕಡಾ ಲಾಭಾಂಶ ನೀಡುವರೆ ನಿರ್ದೇಶಕ ಮಂಡಳಿ ಮಾಡಿದ ಶಿಫಾರಸ್ಸನ್ನು ಸರ್ವಸದಸ್ಯರ ಸಭೆಯು ಅನುಮೋದಿಸಿತು.

ಸೊಸೈಟಿಯ ಕುಕ್ಕಿಕಟ್ಟೆ ಶಾಖೆಯ ಶಾಖಾವ್ಯವಸ್ಥಾಪಕ ಶ್ರೀ ವಿಶ್ವನಾಥ ರಾವ್ ರವರ ಧನ್ಯವಾದ ಸಮರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು. ವೇದಿಕೆಯಲ್ಲಿ ನಿರ್ದೇಶಕರಾದ ಯು. ಪ್ರಪುಲ್ಲಚಂದ್ರ ರಾವ್, ವೈ.ಮೋಹನ ರಾವ್, ವೈ. ಮುರಲಿಕೃಷ್ಣ ರಾವ್, ವೈ. ಪ್ರಕಾಶಕುಮಾರ್, ಯು. ಅರವಿಂದ ಕುಮಾರ್, ಬಿ. ಕೃಷ್ಣಮೂರ್ತಿ ರಾವ್ ಹಾಗೂ ಗೀತಾ ಕೃಷ್ಣಕುಮಾರ್ ಉಪಸ್ಥಿತರಿದ್ದರು.

## ಗೃಹಪ್ರವೇಶ

ಶ್ರೀಮತಿ ಚಂದ್ರಮಣಿ ಹಾಗೂ ಶ್ರೀ ಶಶಿಕಾಂತ ರಾವ್ (ಉಚ್ಚಿಲ ದಿ| ಶಿವಶಂಕರ ರಾವ್‌ರವರ ಪುತ್ರ) ದಂಪತಿಗಳು ಪುತ್ತೂರು ತಾಲೂಕಿನ ಆಲಂಕಾರು ಗ್ರಾಮದಲ್ಲಿ ನಿರ್ಮಿಸಿದ ನೂತನ ಗೃಹ 'ಸೌಪರ್ಣಿಕಾ'ದ ಗೃಹ ಪ್ರವೇಶವನ್ನು ತಾ.17-6-2009ರಂದು ನೆರವೇರಿಸಿದರು.

★★★★

ಶ್ರೀಮತಿ ವಿದ್ಯಾ ಮತ್ತು ಶ್ರೀ ಡಾ| ವೈ. ಸುದರ್ಶನ್ ರಾವ್ ದಂಪತಿಗಳು ಉಡುಪಿ ಕುಕ್ಕಿಕಟ್ಟೆಯಲ್ಲಿ ನಿರ್ಮಿಸಿದ ನೂತನ ಗೃಹ 'ಅನಿಕೇತನ'ದ ಗೃಹ ಪ್ರವೇಶವನ್ನು ತಾ.28-9-2009ರಂದು ನೆರವೇರಿಸಿದರು. ಈ ಶುಭ ಸಂದರ್ಭದಲ್ಲಿ ಡಾ| ಚಂದ್ರಶೇಖರರಾವ್ ರವರ 'ಅನಿಕೇತನ' ಪುಸ್ತಕ ಬಿಡುಗಡೆ ಕಾರ್ಯಕ್ರಮವು ನೆರವೇರಿತು. ಪೊಳಲಿ ಸುಬ್ಬರಾವ್ ಇವರ ನೇತೃತ್ವದಲ್ಲಿ ಎಲ್ಲೂರು ಲಕ್ಷ್ಮೀನಾರಾಯಣ ಜ್ಯೋತಿಷ್ಕರವರ ಕುಟುಂಬದವರಿಂದ ಸಂಗೀತ ಕಾರ್ಯಕ್ರಮವು ನೆರವೇರಿತು.

## ಬಾರಕೂರಿನಲ್ಲಿ ಸೌರ ಋಗುಪಾಕರ್ಮ



ಬಾರಕೂರಿನ ಮಾಸ್ತಿಬೈಲಿನಲ್ಲಿರುವ ದಿ| ಕೃಷ್ಣ ರಾಯರ ಮನೆಯಲ್ಲಿ ವರ್ಷಂಪ್ರತಿಯಂತೆ ಬಾರಕೂರಿನ ಸ್ಥಾನಿಕ ಬಂಧುಗಳಿಂದ ಸೌರ ಋಗುಪಾಕರ್ಮ ಕಾರ್ಯಕ್ರಮವು ವಿಜೃಂಭಣೆ ಯಿಂದ ಜರಗಿತು. ವೇ| ಮೂ| ಶ್ರೀ ಉಮೇಶ ಬ್ಯಾರಿಯವರ ನೇತೃತ್ವದಲ್ಲಿ ಶ್ರೀ ಮಂಜುನಾಥ ರಾವ್, ಶ್ರೀ ಜಯರಾಮ ರಾವ್ ಹಾಗೂ ಶ್ರೀ ಶ್ರೀಧರ ರಾವ್ ಇವರ ಮುಂದಾಳತ್ವದಲ್ಲಿ ಸುಮಾರು 25ಕ್ಕೂ ಮಿಕ್ಕಿ ಸ್ಥಾನಿಕ ಬಂಧುಗಳು ಉಪಾಕರ್ಮ ಆಚರಿಸಿದರು.

ವರದಿ : **ಯು. ಆರ್. ಶ್ರೀಧರರಾವ್, ಬಾರಕೂರು**

**ಸಾಮೂಹಿಕ ಗಣಹೋಮ**

ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿ ತಿಂಗಳು **ಸಂಕಷ್ಟಹರ ಚತುರ್ಥಿಯಂದು** ನಡೆಯುತ್ತಿರುವ

**ಸಾಮೂಹಿಕ ಗಣಹೋಮವು**

ತಾ.05-11-2009ರಂದು ನಡೆಯಲಿದೆ.

**ಗಣಹೋಮ ಸೇವಾ ಶುಲ್ಕ ರೂ.51/-**

ಗಣಹೋಮ ಸೇವೆ ನೀಡಲು ಇಚ್ಛಿಸುವವರು ಶಾರದಾ ಮಂಟಪದ ಮೆನೇಜರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.

**- ಶ್ರೀಶಾರದಾ ದೇವಸ್ಥಾನ ವೇದಿಕೆ**

ಶ್ರೀಶಾರದಾ ದೇವಸ್ಥಾನದಲ್ಲಿ

**ನವಂಬರ್ ತಿಂಗಳಲ್ಲಿ**

**ತಾ.14-11-2009ರ ಶನಿವಾರ**

ಸಂಜೆ ಗಂಟೆ 5-00ರಿಂದ

**ಗಮಕವಾಚನ-ಪ್ರವಚನ**

ಕಾರ್ಯಕ್ರಮವು ನಡೆಯಲಿದೆ.

ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**

ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನಕಾರ **ಶ್ರೀ ಬಾರ್ಕೂರು ನಾಗೇಶರಾವ್.**

ಸರ್ವರಿಗೂ ಆದರದ ಸ್ವಾಗತ

**- ಶ್ರೀಶಾರದಾ ದೇವಸ್ಥಾನ ವೇದಿಕೆ**

# ಕಡಬದಲ್ಲಿ 'ನೋಂಪು' ಆಚರಣೆ

ದಿನಾಂಕ 03-09-2009ರಂದು ಕಡಬ ಮಧುವನ ಮನೆಯಲ್ಲಿ ಕುಂಭಾಟ್ ಕುಟುಂಬಸ್ತರು ನೂರಾರು ವರ್ಷಗಳಿಂದ ಆಚರಿಸಿಕೊಂಡು ಬರುತ್ತಿರುವ ಶ್ರೀ ಅನಂತ ಪದ್ಮನಾಭ ವ್ರತಾಚರಣೆಯು (ನೋಂಪು) ಕುಂಭಾಟ್ ಜ್ಞಾನೇಶ್ ಮಂಗಳೂರು ಇವರ ನೇತೃತ್ವದಲ್ಲಿ ವಿಜೃಂಭಣೆಯಿಂದ ಜರಗಿತು. ಬಟ್ಟಪಾಡಿ ಶ್ರೀ ಸೂರ್ಯನಾರಾಯಣ ಭಟ್ ಇವರ ಪ್ರಧಾನ ಪೌರೋಹಿತ್ಯದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಜರಗಿದುವು.

ಈ ಸಂದರ್ಭದಲ್ಲಿ ಬೆಂಗಳೂರಿನ ಶ್ರೀ ವಿಶ್ವನಾಥ್ ಎಂಬವರು ದಾನದ ಮಹತ್ವದ ಬಗ್ಗೆ ಉಪನ್ಯಾಸ ನೀಡಿದರು. ಕುಂಭಾಟ್ ಕುಟುಂಬದ ಟ್ರಸ್ಟಿನ ವತಿಯಿಂದ 5 ಮಂದಿ ಬಡ ವಿದ್ಯಾರ್ಥಿಗಳಿಗೆ; ಓರ್ವ ಅನಾಥ ದಲಿತ ಮಹಿಳೆಗೆ, 2 ಬಡ ಕುಟುಂಬಗಳಿಗೆ ಧನ ಸಹಾಯ ನೀಡಲಾಯಿತು.

ಉಡುಪಿ ಜಿಲ್ಲಾ ಸಂಸದರಾದ ಶ್ರೀ ಡಿ.ವಿ. ಸದಾನಂದ ಗೌಡ; ಜಿಲ್ಲಾ ಪಂಚಾಯತ್ ಸದಸ್ಯ ಶ್ರೀ ಕೃಷ್ಣ ಶೆಟ್ಟಿ, ಸುಬ್ರಹ್ಮಣ್ಯ ಸಭಾದ ಅಧ್ಯಕ್ಷ ಶ್ರೀ ಎಸ್. ಕೆ. ಜಗನ್ನಿವಾಸ ರಾವ್ ಮೊದಲಾದ ಗಣ್ಯರು ಆಗಮಿಸಿದ್ದರು. ಧಾರ್ಮಿಕ ಸೇವೆಗಾಗಿ ರಾಷ್ಟ್ರಪ್ರಶಸ್ತಿ ಪಡೆದ ಕೆ. ಗೋಪಾಲರಾವ್ ಕಾರ್ಯಕ್ರಮ ನಿರೂಪಿಸಿದರು. ಕುಂಭಾಟ್ ಪ್ರಕಾಶರಾವ್ ಧನ್ಯವಾದ ಅರ್ಪಿಸಿದರು.

ವರದಿ : **ಗೋ.ರಾ.ಕೆ. ಕಡಬ**

# ಕಾಸರಗೋಡು : ಶ್ರಾವಣ ಶುಕ್ರವಾರ ಪೂಜೆ

ಶಿವಬ್ರಾಹ್ಮಣ ಸಭಾ (ರಿ.), ಕಾಸರಗೋಡು ಮಹಿಳಾ ಘಟಕದ ವತಿಯಿಂದ ವರ್ಷಂಪ್ರತಿ ನಡೆಯುವ ಶ್ರಾವಣ ಶುಕ್ರವಾರ ಪೂಜೆಯು ಮಹಿಳಾ ಸಂಘದ ಅಧ್ಯಕ್ಷೆ ಶ್ರೀಮತಿ ರಾಜೇಶ್ವರಿ ಶುಭಾಕರ್ ಮಣ್ಣಿಪ್ಪಾಡಿಯವರ 'ಸುರಭಿ' ಮನೆಯಲ್ಲಿ ತಾ.21-08-2009, ಶುಕ್ರವಾರ ಅಪರಾಹ್ನ 3 ಗಂಟೆಯಿಂದ 5ರ ವರೆಗೆ ಲಲಿತ ಸಹಸ್ರನಾಮ, ದಾಸ ಸಂಕೀರ್ತನೆ, ಭಕ್ತಿಗೀತೆ, ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳೊಂದಿಗೆ ಸಂಪನ್ನಗೊಂಡಿತು. ಉಪಸ್ಥಿತರಿದ್ದ ಮುತ್ತೈದೆಯರೆಲ್ಲಾ ಸೇರಿ ಭಕ್ತಿ ಭಾವಾವಿಷ್ಠರಾಗಿ ದೇವರಿಗೆ ಆರತಿಯನ್ನು ಬೆಳಗಿಸಿ, ಹಿರಿಯರಿಗೆ ನಮಸ್ಕರಿಸಿ, ಫಲ ತಾಂಬೂಲಗಳನ್ನು ನೀಡಿ ಮನಸ್ಸಿಗೆ ನೆಮ್ಮದಿ ದೊರೆಯಿತೆಂಬ ಧನ್ಯತೆಯೊಂದಿಗೆ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನೆರವೇರಿಸಿದರು.

# ಜಲಲಕ್ಷ್ಮೀ ಸಂಗೀತ-ನೃತ್ಯ ವಿದ್ಯಾಲಯದ ಉದ್ಘಾಟನೆ

ಇಂದಿನ ಯುವ ಜನಾಂಗವನ್ನು ದೇಶೀಯ ಸಂಗೀತ ಮತ್ತು ಸಂಸ್ಕೃತಿಯತ್ತ ಸೆಳೆಯುವ ನಿಟ್ಟಿನಲ್ಲಿ ಸೆ.19ರಂದು ಮಣಿಪಾಲದ ಪ್ರಸನ್ನ ಗಣಪತಿ ದೇವಸ್ಥಾನದ ಸಮೀಪವಿರುವ ಜಲಪ್ರಭ ನಿವಾಸದಲ್ಲಿ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನತೀರ್ಥ ಶ್ರೀಪಾದರು ಜಲಲಕ್ಷ್ಮೀ ಸಂಗೀತ ನೃತ್ಯ ವಿದ್ಯಾಲಯದ ಉದ್ಘಾಟನೆಯನ್ನು ಮಾಡಿದರು.

ಮಣಿಪಾಲದ ವಿ.ವಿ. ಮಾನವ ಸಂಪನ್ಮೂಲ ವಿಭಾಗದ ಸಹ ಕುಲಸಚಿವ ಶ್ರೀ ಟಿ. ರಂಗ ಪೈ, ಆರ್‌ಆರ್‌ಸಿಯ ನಿರ್ದೇಶಕ ಹೆರಂಜೆ ಕೃಷ್ಣ ಭಟ್ಟ ಮುಖ್ಯ ಅತಿಥಿಗಳಾಗಿದ್ದರು. ಜಲಲಕ್ಷ್ಮೀ ಚ್ಯಾರಿಟೇಬಲ್ ಟ್ರಸ್ಟಿನ ವಿಶ್ವಸ್ತರಾದ ಬಿ. ಬಾಲಚಂದ್ರರಾವ್ ಸ್ವಾಗತಿಸಿದರು. ಟ್ರಸ್ಟಿಗಳಾದ ಶ್ರೀಮತಿ ಪ್ರಭಾವತಿ ಬಿ. ರಾವ್, ಶ್ರೀಮತಿ ಸರೋಜಿನಿ ಆರ್. ಶಾಸ್ತ್ರಿ, ಶ್ರೀಮತಿ ವಿದ್ಯಾವತಿ ಕೆ. ರಾವ್ ಉಪಸ್ಥಿತರಿದ್ದರು. ಮುಖ್ಯ ಸಂಘಟಕ ರವಿಕಿರಣ್ ವಂದಿಸಿದರು. ಮೃದುಲಾ ಕಾರ್ಯಕ್ರಮ ನಿರೂಪಿಸಿದರು.

# ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ ಪುತ್ತೂರು ಶಾಖೆಯ ಉದ್ಘಾಟನೆ

"ಸಮಾಜದ ಪ್ರಗತಿಗೆ, ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವುದು ಅಗತ್ಯ ಹಾಗೂ ಅನಿವಾರ್ಯ. ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ ವಿದ್ಯಾಭ್ಯಾಸ ಸಾಲವನ್ನು ಕಡಿಮೆ ಬಡ್ಡಿದರದಲ್ಲಿ ನೀಡುವ ಮೂಲಕ ನೂರಾರು ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಸಹಾಯವನ್ನು ಮಾಡಿದೆ. ಅದೇ ರೀತಿ, ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ವ್ಯಕ್ತಿಗಳ ಅಗತ್ಯಗಳಿಗೆ ಸುಲಭ ಸಾಲ ನೀಡುವುದರ ಮೂಲಕ-ಅವರ ಆರ್ಥಿಕ ಅಭಿವೃದ್ಧಿಗೂ ಸಹಾಯವನ್ನು ಮಾಡಿದೆ. ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ ಹಾಗೂ ಇದರ ಶಾಖೆಗಳು ಇದೇ ರೀತಿ ಸಮಾಜಮುಖಿಯಾಗಿ ಕಾರ್ಯನಿರ್ವಹಿಸಿ, ಚೆನ್ನಾಗಿ ಅಭಿವೃದ್ಧಿಗೊಳ್ಳಲಿ" ಎಂದು ಶ್ರೀ ಸುಬ್ರಹ್ಮಣ್ಯ ಮಠಾಧೀಶರಾದ ಶ್ರೀ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿಯವರು ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ ಪುತ್ತೂರು ಶಾಖೆಯನ್ನು ಉದ್ಘಾಟಿಸಿ ತಮ್ಮ ಆಶೀರ್ವಚನ ಭಾಷಣದಲ್ಲಿ ಹರಸಿದರು.

ತಾ.04-09-2009ನೇ ಶುಕ್ರವಾರದಂದು 'ಪುತ್ತೂರು ಸೆಂಟರ್' ವಾಣಿಜ್ಯ ಸಂಕೀರ್ಣದಲ್ಲಿ-ಸುಬ್ರಹ್ಮಣ್ಯ ಸಹಕಾರ ಸಂಘದ ಪುತ್ತೂರು ಶಾಖೆಯ ಉದ್ಘಾಟನಾ ಸಮಾರಂಭವು ನಡೆಯಿತು. ಪ್ರಾರ್ಥನೆ ಬಳಿಕ ಸಂಘದ ಉಪಾಧ್ಯಕ್ಷರಾದ ಶ್ರೀ ಎಂ. ಎಸ್. ರಘುನಾಥ ರಾವ್‌ರವರು ಸಭೆಗೆ ಬಂದ ಅತಿಥಿಗಳನ್ನು ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ ಶ್ರೀಮತಿ ಮಮತಾ ಆರ್.ರಾವ್‌ರವರು ಸಂಘದ ಪ್ರಗತಿ ಬಗ್ಗೆ ವರದಿಯನ್ನು ವಾಚಿಸಿದರು. ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಪುತ್ತೂರಿನ ಮಾಜಿ ಶಾಸಕರಾದ ಶ್ರೀ ಕೆ. ರಾಮಭಟ್ ಹಾಗೂ ಶ್ರೀ ರಾಮಕೃಷ್ಣ ಸೇವಾ ಸಮಾಜದ ಅಧ್ಯಕ್ಷರಾದ ಶ್ರೀ ಎನ್. ಸುಬ್ರಹ್ಮಣ್ಯಂರವರು ಸಂದರ್ಭೋಚಿತವಾಗಿ ಮಾತನಾಡಿ, ಸಂಘಕ್ಕೆ ಶುಭ ಹಾರೈಸಿದರು. ಸಂಘದ ಅಧ್ಯಕ್ಷರಾದ ಶ್ರೀ ಪಿ. ರಾಜಗೋಪಾಲ ರಾವ್‌ರವರು, ತನ್ನ ಅಧ್ಯಕ್ಷೀಯ ಭಾಷಣದಲ್ಲಿ, ಸಂಘದ ಹಣ ವಿನಿಯೋಗದ ಬಗ್ಗೆ ಭರವಸೆಯನ್ನು ನೀಡಿದರು. ಇದೇ ಸಂದರ್ಭದಲ್ಲಿ ಸಂಘದ ಹೆಚ್ಚಿನ ಮೊತ್ತದ ಪಾಲುಬಂಡವಾಳ ಖರೀದಿಸಿದ ಶ್ರೀ ಎಂ. ಎಸ್. ರಾಧಾಕೃಷ್ಣ ರಾವ್‌ರವರನ್ನು ಶಾಲು ಹೊದಿಸಿ ಗೌರವಿಸಲಾಯಿತು. ವೇದಿಕೆಯಲ್ಲಿ ಶ್ರೀ ಸುಬ್ರಹ್ಮಣ್ಯ ಎಸ್. ರವರು ಉಪಸ್ಥಿತರಿದ್ದರು.

ಸಂಘದ ಗೌರವಾನ್ವಿತ ಸಲಹೆಗಾರರಲ್ಲೊಬ್ಬರಾದ ಶ್ರೀ ಎನ್. ಕೆ. ಜಗನ್ನಿವಾಸ ರಾವ್‌ರವರು ಕಾರ್ಯಕ್ರಮವನ್ನು ನಿರ್ವಹಿಸಿ, ಕೊನೆಯಲ್ಲಿ ಧನ್ಯವಾದವನ್ನು ಸಮರ್ಪಿಸಿದರು. ಈ ಸಮಾರಂಭದಲ್ಲಿ ಸಂಘದ ನಿರ್ದೇಶಕರುಗಳಾದ ಶ್ರೀ ಎನ್. ಎಸ್. ನಟರಾಜ, ಶ್ರೀ ಅನಿಲ್‌ರಾವ್ ಬಿ. ಎಸ್., ಶ್ರೀ ಪ್ರದೀಪ್ ರಾವ್ ಕೆ., ಶ್ರೀ ಚೇತನ್ ಶರ್ಮ ಹಾಗೂ ಶ್ರೀಮತಿ ಕನಕವಲ್ಲಿ ಹರ್ಷಕುಮಾರ್‌ರವರು ಭಾಗವಹಿಸಿದ್ದರು.





ವರದಿ : **ಶ್ರೀಮತಿ ಮಮತರಾಧಾಕೃಷ್ಣರಾವ್**

# "ಹೊತ್ಯಾಕ್ ಹೋತಿಲ್ಲೆ?"

- ಮ.ನಾ.ಹೆಬ್ಬಾರ, ಎಂ.ಎ., ಬಿ.ಎಡ್.

## ಶ್ರೀಮತಿ ಮತ್ತು ಶ್ರೀ ಮನಾಹೆಬ್ಬಾರ್ ಇವರ ಅಮೇರಿಕಾ ಪ್ರಯಾಣದ ಅನುಭವ



ದಿನಾಂಕ 23-05-2009ರ ಸಂಜೆ 6-30ಕ್ಕೆ ಬೆಂಗಳೂರಿನ ಎಚ್.ಎಸ್.ಆರ್. ಬಡಾವಣೆಯಿಂದ ಹೊರಟು ದೇವನಹಳ್ಳಿ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣವನ್ನು ತಲುಪಿದೆವು. ರಾತ್ರಿ 10-30ಕ್ಕೆ ನಿಲ್ದಾಣದ ಒಳಗೆ ಹೋಗಿ ನಮ್ಮ ಲಗೇಜುಗಳನ್ನೆಲ್ಲಾ ತೂಕ ಮಾಡಿಸಿ ನಿಲ್ದಾಣದ ಅಧಿಕಾರಿಗಳಿಗೆ ಒಪ್ಪಿಸಿ ಪಾಸ್‌ಪೋರ್ಟ್ ವೀಸಾ ಮತ್ತಿತರ ದಾಖಲೆಗಳನ್ನೆಲ್ಲಾ ತಪಾಸಣೆ ಮಾಡಿಸಿ 10-00 ಗಂಟೆಗೆ (24-5-2009) ಏರ್ ಫ್ರಾನ್ಸ್‌ನ ವಿಮಾನವನ್ನೇರಿದೆವು. 1-20ಕ್ಕೆ ವಿಮಾನವು ಚಲಿಸತೊಡಗಿತು. ಹೊರಗಡೆ ಇಣುಕಿದರೆ ಕತ್ತಲಲ್ಲಿ ಏನೇನೂ ಕಾಣಿಸದು. ಕೂಡಲೇ ಕುಳಿತಲ್ಲೇ ನಿದ್ರೆಯೂ ಬರುತೊಡಗಿತು. ಅಷ್ಟರಲ್ಲಿ ನಮಗೆ ದಕ್ಷಿಣ ಭಾರತೀಯ ಸಸ್ಯಾಹಾರಿ ಊಟ ಕೊಟ್ಟರು. ರೊಟ್ಟಿ, ಹಣ್ಣು, ಹಾಲು, ಮೊಸರು ಇತ್ಯಾದಿ ಚೆನ್ನಾಗಿತ್ತು. ಊಟವಾದ ಮೇಲೆ ನಿದ್ರೆ ಆವರಿಸಿತು. ಬೆಳಕು ಹರಿಯುವಾಗ ನಾವು ಫ್ರಾನ್ಸ್ ದೇಶದ ಮೇಲಿಂದ ಹಾರುತ್ತಿದ್ದೆವು. ವಿಚಾರಿಸಿದಾಗ ತಿಳಿಯಿತು - ಫ್ರಾನ್ಸ್‌ನ ರಾಜಧಾನಿ ಪ್ಯಾರಿಸ್ ನಗರವು ಸಮೀಪಿಸುತ್ತಿದೆಯೆಂದು. ಕೆಳಗಡೆ ನೆಲದಲ್ಲಿ ಅರೇಬಿಯಾ, ಇಸ್ರೇಲ್, ಗ್ರೀಸ್, ಇಟಲಿ ಮುಂತಾದ ದೇಶಗಳೆಲ್ಲಾ ಹಾದು ಹೋಗಿದ್ದವು. ಹಾಗೆಯೇ ಮುಂದುವರಿದು ಬರುತ್ತಿರುವಾಗ ನಮ್ಮ ಕೈಗಡಿಯಾರ ಮಾತ್ರ ಚಲಿಸುತ್ತಲೇ ಇದ್ದು ಬೆಳಗ್ಗೆ 8, 9, 10 ಗಂಟೆಗಳನ್ನು ತೋರಿಸುತ್ತಾ 12ಕ್ಕೆ ಮುಟ್ಟಿತು. ಆಗ ಪ್ಯಾರಿಸ್ ನಗರದ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಯಿತು. ಅಲ್ಲಿ ವಿಚಾರಿಸಿದಾಗ ಫ್ರಾನ್ಸ್ ದೇಶದ ಸ್ಥಳೀಯ ಸಮಯವು ಬೆಳಗಿನ 8-40 ಗಂಟೆ. ಇಷ್ಟರ ಒಳಗೆ ಬೆಂಗಳೂರಿನಿಂದ ಹೊರಟು ಅರ್ಧ ಗಂಟೆಯಲ್ಲಿ ಒಮ್ಮೆ ಪ್ಯಾರಿಸ್‌ನಲ್ಲಿ ಇಳಿಯುವ ಅರ್ಧ ಗಂಟೆ ಮೊದಲೊಮ್ಮೆ ನಮಗೆ ಉಪಾಹಾರ ಕೊಟ್ಟಿದ್ದರು. ನಾವು ಮೊದಲೇ ತಿಳಿಸಿದ್ದರಿಂದ ಶುದ್ಧ ಸಸ್ಯಾಹಾರ ಹಾಲು, ಮೊಸರು, ಹಣ್ಣು (ಪಪ್ಪಾಯಿ, ಅನನಾಸು, ಮಾವು, ದ್ರಾಕ್ಷಿ, ಸೇಬು) ಚಪಾತಿ-ಬಾಜಿ, ಚಟ್ನಿ ಉತ್ತಮವಾಗಿತ್ತು. ಬೆಳಗಿನ ದಿನಚರಿ, ಮುಖ ತೊಳೆಯುವುದು ಇತ್ಯಾದಿ ವಿಮಾನದೊಳಗೇ ನಡೆದಿತ್ತು. ಕೆಳಗಿಳಿಯುವಾಗ ಆ ವಿಮಾನದ ಸಿಬ್ಬಂದಿಗಳಿಂದ ನಗುಮೊಗದ ವಂದನೆ ಮತ್ತು ಬೀಳ್ಕೊಡುಗೆ!

ಕೆಳಗಿಳಿದಾಕ್ಷಣ ನಮ್ಮನ್ನು 'ಮಿನಿಬಸ್' ಒಂದರಲ್ಲಿ ಅಮೇರಿಕಕ್ಕೆ ಹೊರಡುವ ನಿಲ್ದಾಣದೆಡೆಗೆ (2 ಮೈಲಿಗಳಷ್ಟು ದೂರವಿದೆ) ಕರೆದುಕೊಂಡು ಹೋದರು. ಅಲ್ಲಿ ಅಮೇರಿಕಾ ದೇಶದ ಅಟ್ಲಾಂಟಾ ನಗರಕ್ಕೆ ಹೊರಡುವ ವಿಮಾನವು ಅಲ್ಲಿನ ಸಮಯ ಬೆಳಗಿನ 10-40ಕ್ಕೆ ಹೊರಡುವುದಿತ್ತು. ಇಷ್ಟರಲ್ಲಿ ನಮ್ಮ ಲಗೇಜುಗಳ ಚಿಂತೆಯೇ ನಮಗಿಲ್ಲ, ಅವುಗಳಿನ್ನು ನಮಗೆ ಸಿಗುವುದು ಅಮೇರಿಕದ ಅಟ್ಲಾಂಟಾ ದಲ್ಲಿಯೇ. ಪ್ಯಾರಿಸ್‌ನ ವಿಮಾನ ನಿಲ್ದಾಣದಲ್ಲಿ ಅಟ್ಲಾಂಟಕ್ಕೆ ಹೊರಡುವ ಇ2 ಕೌಂಟರ್ ಎಲ್ಲೆಂದು ವಿಚಾರಿಸಿ ವಿಮಾನವೇರಲು ಅಲ್ಲಿಗೆ ಹೋಗಬೇಕು. ಮಾಳಿಗೆ ಹತ್ತಿ ಸುಮಾರು 1 ಕಿ.ಮೀ.ನಷ್ಟು ನಡೆದು ಮತ್ತೆ ನಮ್ಮ ಕೈಚೀಲ, ದೇಹ, ಕೋಟು, ಪಾದರಕ್ಷೆ ಇತ್ಯಾದಿಗಳ ತಪಾಸಣೆ, ರಹದಾರಿ (Passport) ವೀಸಾ, ಟಿಕೇಟು ಮತ್ತಿತರ ರೆಕಾರ್ಡುಗಳ ಪರಿಶೀಲನೆ ನಡೆಯುವಾಗಲೇ ಬೆಳಗಿನ 10-00 ಗಂಟೆ ದಾಟಿತು. ನಮ್ಮ ಅಟ್ಲಾಂಟ ವಿಮಾನ ಹೊರಡುವಲ್ಲಿಗೆ ಗೇಟು ಸಂಖ್ಯೆ 26 ಎಂದು ತಿಳಿದು ಅಲ್ಲಿಗೆ ಹೋದಾಗ ಉಳಿದುದು 10 ನಿಮಿಷ ಮಾತ್ರ. ಒಳ ಹೊಕ್ಕು ನಮಗೆ ಮೀಸಲಾದ 30ಕೆ ಮತ್ತು 30ಎಲ್

(6ನೇ ಪುಟಕ್ಕೆ ...)

ಉಡುಪಿ ವಿಶಿಷ್ಟ ರುಚಿಯುಳ್ಳ
Rao's 'ಮಾತೃಛಾಯಾ'ರವರ
ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪೆಮಿಡಿ ಹಾಗೂ ಮಿಡಿ ಉಪ್ಪಿನಕಾಯಿ
ಹಪ್ಪಳ ಹಾಗೂ ಸೆಂಡಿಗೆಗಳು, ಶುದ್ಧ ದನದ ತುಪ್ಪ ಹಾಗೂ ಜೇನು ತುಪ್ಪ
-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-
ಭಾರತ್ ಸ್ಟೋರ್ಸ್
ರಥಬೀದಿ, ಉಡುಪಿ - 576 101. ಫೋನ್ : 2522444

# ಶಿವಬ್ರಾಹ್ಮಣ ಸಭಾ, ಕಾಸರಗೋಡು : ಮಹಾಸಭೆ ಮತ್ತು ಸಮಾವೇಶ

ಶಿವಬ್ರಾಹ್ಮಣ ಸಭಾ, ಕಾಸರಗೋಡು ಇದರ ವಾರ್ಷಿಕ ಸಮಾವೇಶವು ತಾ.04-10-2009 ರಂದು ಕಾಸರಗೋಡಿನ ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಾಲಯ ಪ್ರಾಂಗಣದಲ್ಲಿ ನಡೆಯಿತು. ವಾರ್ಷಿಕ ಮಹಾಸಭೆಯಲ್ಲಿ ವರದಿ, ಲೆಕ್ಕಪತ್ರಗಳ ಮಂಡನೆ ನಡೆದು ಮುಂದಿನ ವರ್ಷಗಳ ಪದಾಧಿಕಾರಿಗಳ ಆಯ್ಕೆಯು ನಡೆಯಿತು. ಸಭಾದ ಅಧ್ಯಕ್ಷ ಶ್ರೀ ಎ.ವಿ. ಶ್ಯಾನುಭೋಗ್ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಡಾ। ಪಿ.ಪಿ.ರಾವ್ ಸ್ವಾಗತಿಸಿ ಶ್ರೀಮತಿ ಸುಮಂಗಲಾ ಮನೋಹರ್ ವಂದಿಸಿದರು. ಅನಂತರ ನಡೆದ ಜಿಲ್ಲಾ ಸಮಾವೇಶವನ್ನು ಶ್ರೀ ಪಿ. ಸತೀಶ್‌ರಾವ್ ಪುತ್ತೂರು ಉದ್ಘಾಟಿಸಿ ನಮ್ಮ ಸಮಾಜವು ಈಗ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮಾತನಾಡಿ ಅವುಗಳ ಪರಿಹಾರಕ್ಕೆ ಶ್ರಮಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಸಂದ ವರ್ಷದಲ್ಲಿ ಸ್ವರ್ಗಸ್ಥರಾದ ದಿ। ಲಕ್ಷ್ಮೀಅಮ್ಮ ಕಾಸರಗೋಡು ಮತ್ತು ದಿ। ವಾಗ್ದೇವಿ ಚಂದ್ರಗಿರಿಯವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ವಾರ್ಷಿಕ ಪತ್ರಿಕೆ 'ಶಿವಗಂಗಾ'ವನ್ನು ಶ್ರೀ ರಾಂ ಎಲ್ಲಂಗಳ ಬಿಡುಗಡೆಗೊಳಿಸಿದರು. ಗತ ವರ್ಷದಲ್ಲಿ ವಿವಾಹಿತರಾದ ನೂತನ ವಧೂವರರಿಗೆ ಶ್ರೀಮತಿ ಮಾಲತೀ ಜಗದೀಶ್ ಶುಭಾಶಂಸನೆ ಸಲ್ಲಿಸಿದರು. ಹದಿನಾಲ್ಕು ವರ್ಷಗಳ ಕಾಲ ಅಧ್ಯಕ್ಷರಾಗಿದ್ದು ಪ್ರಕೃತ ಗೌರವಾಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಎ.ವಿ.ಶ್ಯಾನುಭೋಗ್ ಇವರಿಗೆ ಸ್ಮರಣಿಕೆ, ಫಲಪುಷ್ಪಗಳನ್ನಿತ್ತು, ಕೃತಜ್ಞತಾ ವಂದನೆ ಸಲ್ಲಿಸಲಾಯಿತು. ಡಾ। ಸುರೇಖಾ ವರದರಾಜ, ಪುತ್ತೂರು ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಶ್ರೀ ಸುಕುಮಾರ ಆಲಂಪಾಡಿ, ಸ್ವಾಗತಿಸಿ ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ರಾಜೇಶ್ವರೀ ಮನ್ನಿಪ್ಪಾಡಿ ವಂದಿಸಿದರು.

ಮಧ್ಯಾಹ್ನ ಭೋಜನಾನಂತರ ಭಕ್ತಿಗೀತೆ-ಭಾವಗೀತೆ ಹಾಸ್ಯ ಚಟಾಕಿಗಳನ್ನೊಳಗೊಂಡ ಮನರಂಜನಾ ಕಾರ್ಯಕ್ರಮ ನಡೆಯಿತು. ಅನಂತರ ನಡೆದ ಸಮಾರೋಪ ಸಮಾರಂಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ, ವಿದ್ಯಾರ್ಥಿ ವೇತನ ವಿತರಣೆ, ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ನಡೆದುವು. ಕಂಬಾರು ಕು। ಮಾಧುರಿ ಇವರಿಗೆ ಕಲಾಪ್ರತಿಭಾ ಪುರಸ್ಕಾರ, ಅಡೂರು ಕು। ಅಪೂರ್ವ ಇವರಿಗೆ ಲಲಿತಕಲಾ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ವಿವಿಧ ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆಗಳನ್ನು ತೋರಿಸಿದ ಶ್ರೀ ಕೆ.ಜಿ.ಶ್ಯಾನುಭೋಗ್ ಕೂಡ್ಲು, ಶ್ರೀಮತಿ ವಿಜಯಲಕ್ಷ್ಮೀ ಶ್ಯಾನುಭೋಗ್ ಕೂಡ್ಲು ಮತ್ತು ಶ್ರೀಮತಿ ಜಯಶ್ರೀ ಶ್ರೀಕೃಷ್ಣಯ್ಯ ಅನಂತಪುರ ಇವರನ್ನು ಅಭಿನಂದಿಸಲಾಯಿತು.

ಯುವ ಪ್ರತಿಭೆಗಳಾದ ಶ್ರೀ ಸುದರ್ಶನ ಕೆ.ವಿ. ಮತ್ತು ಶ್ರೀ ನಾಗರಾಜ ರಾವ್ ವರ್ಕಾಡಿ ಇವರನ್ನು ಸನ್ಮಾನಿಸಲಾಯಿತು. ಸಮಾಜದ ಹಿರಿಯರಾದ ಶ್ರೀಮತಿ ಸಂಜೀವಿ ಕೂಡ್ಲು, ಶ್ರೀಮತಿ ರಮಾಬಾಯಿ ಅಜ್ಜಾವರ, ಶ್ರೀ ಗೋಪಾಲಕೃಷ್ಣ ರಾವ್ ಕಲ್ಲಕಟ್ಟ ಮತ್ತು ಶ್ರೀ ಕೆ. ಸುಬ್ಬರಾವ್ ಇವರನ್ನು ಗೌರವಿಸಲಾಯಿತು. ಶ್ರೀ ವೈ. ಮೋಹನರಾವ್, ಪ್ರಧಾನ ಸಂಪಾದಕರು, ಶ್ರೀಶಾರದಾ ಪತ್ರಿಕೆ, ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ ಮತ್ತು ಶ್ರೀ ಬಿ. ಕೆ. ಧನಂಜಯರಾವ್ ವಕೀಲರು, ಬೆಳ್ತಂಗಡಿ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಎ.ಎಸ್.ಆರ್.ಟ್ರಸ್ಟಿನ ವತಿಯಿಂದ ನೀಡ ಲಾಗುವ ವಿದ್ಯಾರ್ಥಿ ವೇತನವನ್ನು ಸದ್ರಿ ಟ್ರಸ್ಟಿನ ವ್ಯವಸ್ಥಾಪಕರಾದ ಶ್ರೀ ಎ. ಜೆ. ರಾವ್, ಕೊಯಂಬತ್ತೂರು ಇವರು ನಿರ್ವಹಿಸಿದರು. ಶ್ರೀಮತಿ ಶೈಲಜಾ ಸ್ವಾಗತಿಸಿ, ಜತೆ ಕಾರ್ಯದರ್ಶಿ ಎಂ. ಚಂದ್ರಶೇಖರ ಶ್ಯಾನು ಭೋಗ್ ವಂದಿಸಿದರು. ಪ್ರೊ। ಶ್ರೀನಾಥ್, ಶ್ರೀ ರಾಜೇಂದ್ರ ಬಜಕೊಡ್ಲು, ಶ್ರೀ ವಸಂತರಾಜ ವಿ.ಪಿ., ಶ್ರೀ ಸುಕುಮಾರ ಆಲಂಪಾಡಿ, ಶ್ರೀ ಮನೋಹರ ಎ. ಮತ್ತು ಕು। ಅಕ್ಷತಾ ವಿ.ಎನ್. ಕಾರ್ಯಕ್ರಮ ನಿರೂಪಣೆಯಲ್ಲಿ ಸಹಕರಿಸಿದರು.

# ರೇಸ್ : ಸುದರ್ಶನ್ ರಾವ್‌ಗೆ ಪ್ರಶಸ್ತಿ

(ಒಂದನೇ ಪುಟದಿಂದ)

ಟೀಮ್ ಟಿವಿಎಸ್ ಗಿರ್ಲಿಂಗ್‌ನ ಸುದರ್ಶನ ರಾವ್ ಅವರು 12ನೇ ಜೆಕೆ ಟಯರ್ ಎಫ್‌ಎಂಎಸ್‌ಸಿಐ ರಾಷ್ಟ್ರೀಯ ರೇಸಿಂಗ್ ಚಾಂಪಿಯನ್‌ಶಿಪ್‌ನ ಫಾರ್ಮುಲ ಮಾರುತಿ ಸ್ವಿಫ್ಟ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದಾರೆ. ರಾಮ್ಸ್ ರೇಸಿಂಗ್‌ನ ಅಖಿಲ್ ದೇವ್‌ರಾಗ್ ಫಾರ್ಮುಲ ಹುಂಡೈ ವಿಭಾಗದಲ್ಲಿ ಪ್ರಶಸ್ತಿ ಪಡೆದಿದ್ದಾರೆ.

ಮದ್ರಾಸ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಡೆದ ಅಂತಿಮ ಸುತ್ತಿನ ಬಳಿಕ ಸುದರ್ಶನ್ ಒಟ್ಟಾರೆ 80 ಅಂಕ ಗಳಿಸಿ ಪ್ರಶಸ್ತಿ ತಮ್ಮದಾಗಿಸಿ ಕೊಂಡರು. ವಾಲೆಸ್ ಸ್ಪೋರ್ಟ್ಸ್‌ನ ಅಜಯ್ ಕಿಣಿ 64 ಅಂಕ ಪಡೆದು ಮೊದಲ ರನ್ನರ್ ಅಪ್ ಹಾಗೂ ಪ್ರಥ್ವೀನ್ ರಾಜನ್ 61 ಅಂಕ ಪಡೆದು ದ್ವಿತೀಯ ರನ್ನರ್ ಅಪ್ ಸ್ಥಾನ ಪಡೆದರು.

ಅ.3ರಂದು ನಡೆದ ಐದನೇ ಸುತ್ತಿನಲ್ಲಿ ಸುದರ್ಶನ್ 20:17.048 ಸೆ.ನೊಂದಿಗೆ ಗುರಿ ತಲಪಿ ಮೂರನೇ ಸ್ಥಾನ ಪಡೆದಿದ್ದರು. ಇದರಿಂದಾಗಿ ಅವರು ಒಟ್ಟಾರೆ 76 ಅಂಕ ಗಳಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಉಳಿಸಿಕೊಂಡು ಪ್ರಶಸ್ತಿ ಗೆಲ್ಲುವುದನ್ನು ಖಚಿತಪಡಿಸಿದ್ದರು.

ಮೂಲತಃ ಕಾರ್ಕಳ ತಾಲೂಕಿನ ಕರ್ವಾಲಿನವರಾದ ಸುದರ್ಶನ್ ರಾವ್ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಆರ್‌ಎನ್‌ಎಸ್ ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವಿ ಪಡೆದ ಸುದರ್ಶನ್ ಅಮೆರಿಕದಲ್ಲಿ ವಾಣಿಜ್ಯ ಪೈಲಟ್ ತರಬೇತಿ ಪಡೆದು ಲೈಸನ್ಸ್ ಪಡೆದಿದ್ದಾರೆ.

ರೇಸ್ ಪಟುವಾಗಿ ಮಿಂಚುತ್ತಿರುವ ಸುದರ್ಶನ್ ದೇಶದ ವಿವಿಧೆಡೆ ಎಂಆರ್‌ಎಫ್ ಮತ್ತು ಜೆಕೆ ಟಯರ್ ಸಂಸ್ಥೆ ನಡೆಸಿದ ರೇಸ್‌ಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದಿದ್ದಾರೆ. ಸದ್ಯ ಟಿವಿಎಸ್ ಗಿರ್ಲಿಂಗ್ ಅವರಿಗೆ ಬೆಂಬಲ ನೀಡುತ್ತಿದೆ ಮಾತ್ರವಲ್ಲದೆ ಪ್ರಾಯೋಜಕತ್ವ ವಹಿಸಿದೆ.

ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ಒಮ್ಮೆ ಫಾರ್ಮುಲ ರೇಸಿಂಗ್ ಸ್ಪರ್ಧೆಯನ್ನು ವೀಕ್ಷಿಸಿದ ಸುದರ್ಶನ್ ಅದರ ಕಡೆಗೆ ಅತೀವವಾಗಿ ಆಕರ್ಷಿತರಾದರು. ರೇಸ್ ಆರಂಭಿಸಿದ ವರ್ಷವೇ ಸ್ಪರ್ಧೆಯಲ್ಲಿ ಭಾಗವಹಿಸಿ ರಾಷ್ಟ್ರೀಯ ಮಟ್ಟದಲ್ಲಿ 4ನೇ ಸ್ಥಾನ ಪಡೆದು ದೇಶದ ಗಮನ ಸೆಳೆದರು. ಶುಮಾಕರ್ ಹಾದಿಯಲ್ಲಿ ನಡೆಯಬೇಕೆಂಬ ಕನಸನ್ನು ನೆಚ್ಚಿಕೊಂಡು ಛಲಬಿಡದ ತ್ರಿವಿಕ್ರಮನಾಗಿ ಸ್ಪರ್ಧೆಗಳಲ್ಲಿ ಭಾಗವಹಿಸಿ, ಸೋತರೂ ಕಂಗೆಡದೆ ವಿಜಯಲಕ್ಷ್ಮಿಯನ್ನು ಒಲಿಸಿಕೊಂಡ ಸುದರ್ಶನ್ ಸಾಧನೆಗೆ ಅಭಿನಂದನೆಗಳನ್ನು ಸಲ್ಲಿಸುವ ಜತೆಗೆ ಮಾತೆ ಶಾರದೆಯ ದಯೆಯಿಂದ ಇನ್ನೂ ಹೆಚ್ಚಿನ ಸಾಧನೆ ಅವರದ್ದಾಗಲಿ ಎಂದು ಶ್ರೀಶಾರದಾ ಹಾರೈಸುತ್ತದೆ.

ಸುದರ್ಶನ್ ಸಾಧನೆಯ ಹಿಂದೆ ಅವರ ತಂದೆ, ಕುದುರೆಮುಖ ಕೆ.ಐ.ಓ.ಸಿ.ಎಲ್.ನಲ್ಲಿ ಅಧಿಕಾರಿಯಾಗಿದ್ದು ಈಗ ಸ್ವಯಂ ನಿವೃತ್ತರಾಗಿ ಬೆಂಗಳೂರಿನಲ್ಲಿ ನೆಲೆಸಿರುವ ಕರ್ವಾಲು ಶಂಕರನಾರಾಯಣರಾವ್-ಸಂಧ್ಯಾ ದಂಪತಿಗಳ ಬೆಂಬಲದ ಶ್ರೀರಕ್ಷೆ ಇದೆ.

# ಸೌಂದರ್ಯ ಲಹರಿ ಸಪ್ತಾಹ-ನವಂಬರ್ 2009

ಶ್ರೀ ಶ್ರೀ ಶಂಕರ ಭಾರತೀ ಸ್ವಾಮಿಗಳು, ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠ ಕೆ.ಆರ್.ನಗರ ಮೈಸೂರು ಇವರ ನಿರ್ದೇಶನದಂತೆ ಈ ವರ್ಷವೂ ಮಾರ್ಗಶಿರ ಮಾಸದ ಕೊನೆಯಲ್ಲಿ ಅಂದರೆ ದಿನಾಂಕ 24-11-2009ರಿಂದ 30-11-2009ರ ವರೆಗೆ ಸೌಂದರ್ಯ ಲಹರಿ ಸಪ್ತಾಹವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ನಡೆಸಲು ಉದ್ದೇಶಿಸಲಾಗಿದೆ.

ಉಡುಪಿ ಜಿಲ್ಲೆಯ ವಿವಿಧ ಕೇಂದ್ರಗಳಲ್ಲಿ ಮೇಲಿನಂತೆ ಸೌಂದರ್ಯ ಲಹರಿ ಸಪ್ತಾಹ ಈ ವರ್ಷವೂ ಜ್ಞಾನಭಾರತಿ (ರಿ.) ಉಡುಪಿ, ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ ಮತ್ತು ಹವ್ಯಕ ಸಭಾ (ರಿ.), ಉಡುಪಿ ಇವುಗಳ ಜಂಟಿ ಆಶ್ರಯದಲ್ಲಿ ನವಂಬರ್ 24ರಿಂದ ನವಂಬರ್ 30, 2009ರ ವರೆಗೆ ಜರಗಲಿದೆ. ಉಡುಪಿ ಶ್ರೀ ಶಾರದಾಂಬಾ ದೇವಸ್ಥಾನ, ಕುಂಜಿಬೆಟ್ಟು, ಬಾರ್ಕೂರು, ಶ್ರೀ ಪಂಚಲಿಂಗೇಶ್ವರ ದೇವಸ್ಥಾನ, ಕಮಲಶಿಲೆ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನ, ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನ, ಅಂಬಲಪಾಡಿ ಶ್ರೀ ಜನಾರ್ದನ ಮಹಾಕಾಳಿ ದೇವಸ್ಥಾನ, ಹಂಗಾರಕಟ್ಟೆ ಬಾಳ್ಕುದ್ರು ಮಠ ಮತ್ತು ಕಾರ್ಕಳದಲ್ಲಿ ಶ್ರೀ ಸೌಂದರ್ಯ ಲಹರೀ ಕೇಂದ್ರಗಳನ್ನು ಆಯೋಜಿಸಲು ನಿರ್ಣಯಿಸಿರುವುದಾಗಿ ಜ್ಞಾನಭಾರತಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವುದು.

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ। ಪ್ರೊ। ಗುರುರಾಜ ಭಟ್ಟರ ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ...)

ಈ ದಂಡಯಾತ್ರೆಯ ಕಾಲದಲ್ಲಿ ಮೌರ್ಯ ರಾಜನು ಅಲ್ಲಲ್ಲಿ ಆರ್ಯರ ನೆಲೆವೀಡುಗಳನ್ನು ಕಲ್ಪಿಸಿ ಅಧಿಕಾರಿಗಳನ್ನು ನೇಮಿಸಿದಂತೆ ಕಂಡುಬರುತ್ತದೆ.

ತಮಿಳು ಗ್ರಂಥಗಳಲ್ಲಿ ಈ ದಂಡಯಾತ್ರೆಯ ಅವಹೇಳನ ವ್ಯಕ್ತವಾಗುತ್ತದೆ. (ಉಪಯೋಗಿಸಿರುವ ಪದಗಳಿಂದ) ವಂಬಮ್ಮರ್ಯೆಯರ್ (ವಿಚಿತ್ರ ಪದ್ಧತಿಯವರು) ವಡಕ್ಕಾರರ್ (ಬಡಗು ಕಡೆಯವರು, ಔತರೇಯರು), ಪುಗೈ ಏಳ್ವರ್ (ಹೊಗೆ ಎಬ್ಬಿಸುವವರು) ಇತ್ಯಾದಿ. ಅಲ್ಲದೆ ಪಾಂಡ್ಯರು ಹೀಗೆ ಬಂದು ನೆಲೆಸಿದ ಆರ್ಯರಿಗೆ ಏನೂ ಪ್ರೋತ್ಸಾಹ ಕೊಡದುದರಿಂದ ಸೇನೆಯು ಹಿಂತಿರುಗಿದ ಮೇಲೆ ಕೆಲವರು ಸಣ್ಣ ಸಣ್ಣ ತುಂಡುಗಳಾಗಿ ಬೆಟ್ಟಗಳನ್ನು ಕಣಿವೆಗಳ ಮುಖಾಂತರ ದಾಟಿ ಪಶ್ಚಿಮ ಕರಾವಳಿಯನ್ನು (ಈಗಿನ ಕೊಚ್ಚಿ, ತಿರುವಾಂಕೂರ್) ಸೇರಿದಂತೆಯೂ ಹೇಳಲ್ಪಟ್ಟಿದೆ.

ಅಶೋಕ ಚಕ್ರವರ್ತಿಯ ಸಾಮ್ರಾಜ್ಯವು ಚೆಲ್ಲಿ ಚದುರಿ ಹೋದಾಗ ದಕ್ಷಿಣದ ಮೇಲ್ಭಾಗದಲ್ಲಿ ಆರ್ಯರ ಗುಂಪಿಗೆ ಕಲೆತ ಶಾತವಾಹನರ ಕೈಯಲ್ಲಿ ರಾಜ್ಯಾಡಳಿತ ಶಕ್ತಿಯು ಸಿಕ್ಕಿತು. ಶಾತವಾಹನರನ್ನು ಕುರಿತಾದ ನಮ್ಮ ತಿಳುವಳಿಕೆಗೆ ಮೂಲಾಧಾರಗಳು ಪುರಾಣಗಳು ಮತ್ತು ಶಿಲಾಸನಗಳು ಎಂದೇ ಹೇಳಬಹುದು. ಇವು ಆಂಧ್ರರಿಗೂ ಶಾತವಾಹನರಿಗೂ ನಡುವೆ ಇದ್ದ ಸಂಬಂಧವನ್ನು ಎತ್ತಿ ತೋರಿಸುತ್ತವೆ. ಶಾಸನಗಳು ಅರಸರನ್ನು ಶಾತವಾಹನ ಕುಲ ಎಂದು ಸೂಚಿಸುತ್ತವೆ. ಈ ಅರಸರನ್ನು ಪುರಾಣಗಳು ಆಂಧ್ರರೆಂದು ಪ್ರಸಂಗಿಸುತ್ತವೆ. ಬಹು ಸಂಕೇತವಾದ ಶಾತವಾಹನವೆಂಬುದು ಕುಲ ಅಥವಾ ವಂಶವನ್ನು ಸೂಚಿಸುವ ಹೆಸರಾಗಿದ್ದಿರಬೇಕು. ಆದರೆ ಆಂಧ್ರವೆಂಬುದು ಒಂದು ಜಾತಿ ಯಾ ಗುಂಪಾಗಿರಬೇಕು. ಪುರಾಣಗಳು ಶಾತವಾಹನರ ಮೊದಲನೆಯ ಅರಸನನ್ನು ಆಂಧ್ರಜಾತಿಯ (ಆಂಧ್ರ ಕುಲಸಂಭೂತ) ಎಂದು ಕರೆದಿರುವುದು ಅರ್ಥಗರ್ಭಿತವಾಗಿದೆ.

ಐತರೇಯ ಬ್ರಾಹ್ಮಣದಲ್ಲಿ ಆಂಧ್ರರು ದಾಶ್ಯುವಂಶಕ್ಕೆ ಕಲೆತವರೆಂಬ ವಿಚಾರವಾಗಿ ಮೊಟ್ಟ ಮೊದಲಾಗಿ ಸೂಚಿತವಾಗಿದೆ. ಅದೇ ಐತರೇಯ ಬ್ರಾಹ್ಮಣದಲ್ಲಿ ಆಂಧ್ರರು ವಿಶ್ವಾಮಿತ್ರನ ವಂಶಸಂಜಾತರೆಂದು ಸೂಚಿತವಾಗಿರುವುದೂ, ಶಾತವಾಹನ ಅರಸರು ತಮ್ಮ ಮಾತೃವರ್ಗದವರ ಅಂಕಿತವನ್ನು ತಮ್ಮ ಹೆಸರಿನಲ್ಲಿ ತಾಳಿರುವುದೂ-ಉದಾಹರಣೆಗಾಗಿ ಗೌತಮೀ ಪುತ್ರ ಶತಕರ್ಣಿ ಇತ್ಯಾದಿ ಆರ್ಯರಿಗೂ, ದ್ರಾವಿಡಾಂಧ್ರರಿಗೂ ಇದ್ದ ಸಂಬಂಧವನ್ನು ಸೂಚಿಸುವಂತಿದೆ ಎಂದು ಹೇಳಲು ಅಡ್ಡಿ ಇಲ್ಲ.

ಒಬ್ಬೊಬ್ಬ ರಾಜನ ಕಾಲವನ್ನು ಪ್ರತ್ಯಪ್ರತ್ಯೇಕವಾಗಿ ವಿಂಗಡಿಸುವುದು ಕಷ್ಟಸಾಧ್ಯವಾಗಿದ್ದರೂ ಮತ್ಸ್ಯಪುರಾಣವು ಒಳಗೊಂಡಿರುವ ವಂಶಪಾರಂಪರ್ಯವಾದ ವಿವರಣೆಯು ಶಾತವಾಹನ ವಂಶದಲ್ಲಿ ಮೂವತ್ತು ಅರಸರಿದ್ದರೆಂದೂ, ಅವರು ಒಟ್ಟಿನಲ್ಲಿ ನಾನ್ನೂರ ಅರ್ವತ್ತು ವರ್ಷಕಾಲ ರಾಜ್ಯಭಾರ ಮಾಡಿದರೆಂದೂ ಹೇಳುವುದು ನಂಬಿಕೆಗೆ ಅನರ್ಹವಾಗಿಲ್ಲ.

ಕ್ರಿ.ಪೂ. ಸುಮಾರು 230ರಲ್ಲಿ ಈ ವಂಶವನ್ನು ಸ್ಥಾಪಿಸಿದ ಶ್ರೀಮುಖನಿಂದ ಆರಂಭವಾಗಿ ಮೂರನೆಯ ಅರಸನಾದ ಶತಕರ್ಣನ ಕಾಲದಲ್ಲಿ ಮಧ್ಯಭಾರತವನ್ನು ಪಶ್ಚಿಮಭಾರತವನ್ನು ಒಳಗೊಂಡು ಪಶ್ಚಿಮ ಸತ್ರಪರಚಟುವಟಿಕೆಯನ್ನು ಯಶಸ್ವಿಯಾಗಿ ಎದುರಿಸಿ ರಾಜ್ಯವು ಉತ್ತರದ ಕಥಿಯವಾಡದಿಂದ ದಕ್ಷಿಣದ ಕೃಷ್ಣಾನದಿಯವರೆಗೂ ಪಶ್ಚಿಮದ ಕೊಂಕಣದಿಂದ ಪೂರ್ವದ ಬಿರಾರ್ ವರೆಗೂ ವಿಸ್ತರಣೆಗೊಂಡಿತು. ಶಾತವಾಹನ ಅರಸರಲ್ಲಿ ಕೊನೆಯವರೆಗೂ, ಅತ್ಯಂತ ಪ್ರಭಾವಶಾಲಿಯಾದವನೂ ಎಂದರೆ ಶ್ರೀಯಜ್ಞ ಶತಕರಣಿ. ಇವನ ಆಳ್ವಿಕೆಯ ಕಾಲವು ಕ್ರಿ.ಶ.174 ರಿಂದ 203ರ ವರೆಗೆ. ಇವನು ಪಶ್ಚಿಮ ಭಾರತದಲ್ಲಿ ಶಕರ ಪ್ರಭಾವವನ್ನು ಸಂಪೂರ್ಣ ಧ್ವಂಸ ಮಾಡಿಬಿಟ್ಟನು. ಶ್ರೀಯಜ್ಞ ಶತಕರ್ಣಿಯ ಮರಣಾನಂತರ ಶಾತವಾಹನ ಸಾಮ್ರಾಜ್ಯವು ತುಂಡು ತುಂಡಾಗಿ ಒಡೆದು ಹೋಯಿತು. ಹಾಗೆ ಒಡೆದು ಹೋದ ತುಂಡುಗಳಿಗೆ ಅರಸು ಮನೆತನದ ವಿವಿಧ ಅರಸು ಕುಮಾರರೇ ಒಡೆಯರಾದರು. ಕ್ರಿ.ಶ. ಮೂರನೇ ಶತಮಾನದ ಮಧ್ಯಭಾಗದ ವೇಳೆಗೆ ಎಷ್ಟೋ ಆಡಳಿತ ವಂಶಗಳು ಹೊಸದಾಗಿ ಹುಟ್ಟಿದುವು. ಹೀಗೆ ನಾಲ್ಕು ಶತಮಾನಗಳಿಗೆ ಮೇಲ್ಪಟ್ಟು ಆಂಧ್ರ, ಶಾತವಾಹನರು ಡೆಕ್ಕಾನಿನಲ್ಲಿ ಪ್ರಭಾವಪೂರಿತ ರಾಜ್ಯಾಡಳಿತವನ್ನು ನಡೆಸಿದರು.

(ಮುಂದುವರಿಯುವುದು)


## ರಾಮಾ ಅಟೋಮೊಬೈಲ್ಸ್

ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.

ಫೋನ್ : 2454355, ಮೊಬೈಲ್ : 94485 45702



ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ



# ಸೇಡಿನ ಕಿಚ್ಚೆಬ್ಬಿಸಿದ ರಾಜಸೂಯ



**(ಪೌರಾಣಿಕ ಕಥೆ)**

- ವೈ. ಶಂಕರನಾರಾಯಣ ರಾವ್, ಪಡುಬಿದ್ರಿ

ಹದಿಮೂರು ವರ್ಷಗಳನ್ನು ಹಸ್ತಿನಾವತಿಯಲ್ಲಿ ಕಳೆದ ಪಾಂಡವರು ಬಿದಿಗೆಯ ಚಂದ್ರಮನಂತೆ ಪ್ರವರ್ಧಮಾನಗೊಂಡು ತರುಣರಾದರು. ಕೌರವ ಪುತ್ರರೂ ಪ್ರಾಪ್ತ ವಯಸ್ಕರಾದರು. ಆದರೆ ವಿಕರ್ಣನೊಬ್ಬನನ್ನುಳಿದು ಮಿಕ್ಕವರು ಪಾಂಡವರೊಂದಿಗಿನ ವೈರತ್ವವನ್ನು ವೃದ್ಧಿಸಿಕೊಂಡರು. ಶಕುನಿ, ಧೃತರಾಷ್ಟ್ರರ ಸಂಚಿನಂತೆ ವಾರಣಾವತದಲ್ಲಿ ನಿರ್ಮಿಸಿದ ಅರಗಿನ ಅರಮನೆಯಲ್ಲಿ ಪಾಂಡವರನ್ನು ಇರಿಸಿ ಅವರನ್ನು ಸುಡುವ ಪ್ರಯತ್ನವೂ ನಡೆಯಿತು. ವಿದುರನ ಮುಂದಾಲೋಚನೆಯಿಂದ ಸುರಂಗ ಮಾರ್ಗದ ಮೂಲಕ ತಪ್ಪಿಸಿಕೊಂಡ ಪಾಂಡವರು ವನಾಂತವನ್ನು ಸೇರಿದರು. ವನದಲ್ಲಿ ಹಿಡಿಂಬನೆಂಬ ದೈತ್ಯನನ್ನು ಕೊಂದು ಭೀಮನು ವೇದವ್ಯಾಸರ ಉಪದೇಶದಂತೆ ಆತನ ತಂಗಿ ಹಿಡಿಂಬೆಯನ್ನು ವಿವಾಹವಾದನು. ಹಿಡಿಂಬೆಯಲ್ಲಿ ಘಟೋತ್ಕಚನೆಂಬ ಪುತ್ರನೂ ಜನಿಸಿದನು. ಮುಂದೆ ಬ್ರಾಹ್ಮಣ ವೇಷಧಾರಿಗಳಾಗಿ ಪಾಂಡವರು ಏಕಚಕ್ರಪುರದಲ್ಲಿ ನೆಲೆಸಿದರು. ಅಲ್ಲಿ ಪ್ರಜೆಗಳಿಗೆ ಕಂಟಕಪ್ರಾಯನಾಗಿದ್ದ ಬಕಾಸುರನೆಂಬ ರಾಕ್ಷಸನನ್ನು ಭೀಮನು ಸಂಹರಿಸಿದನು. ಆರು ತಿಂಗಳ ಬಳಿಕ ಪಾಂಡವರು ಬ್ರಾಹ್ಮಣರ ವೇಷದಲ್ಲಿ ಪಾಂಚಾಲ ನಗರವನ್ನು ಪ್ರವೇಶಿಸಿ ದ್ರೌಪದಿ ಸ್ವಯಂವರದಲ್ಲಿ ಭಾಗವಹಿಸಿದರು. ಅಲ್ಲಿ ಅರ್ಜುನನನ್ನು ಪಂತಕ್ಕೊಡ್ಡಿದ್ದ ಮತ್ಸ್ಯಯಂತ್ರವನ್ನು ಭೇದಿಸಿ ತ್ರಿಲೋಕ ಸುಂದರಿ ದ್ರೌಪದಿಯನ್ನು ವರಿಸಿದನು. ಬಳಿಕ ಮಾತೆ ಕುಂತಿಯ ಆಣತಿಯಂತೆ ಪಾಂಚಾಲೆಯು ಪಾಂಡವರೈವರಿಗೂ ಮಡದಿಯಾದಳು.

ಹಸ್ತಿನಾವತಿಗೆ ಪಾಂಡವರ ಮರುಪ್ರವೇಶವಾಯಿತು. ಧೃತರಾಷ್ಟ್ರನು ಪಾಂಡವರ ಮೇಲಿನ ದ್ವೇಷಾಸೂಯೆಗಳನ್ನು ತತ್ಕಾಲಕ್ಕೆ ಶಮನಗೊಳಿಸಿ ರಾಜ್ಯವನ್ನು ಸಮಭಾಗಗಳಾಗಿ ವಿಂಗಡಿಸಿ ಕೌರವ-ಪಾಂಡವರಿಗೆ ಹಂಚಿದನು. ಹಸ್ತಿನಾವತಿಯು ಸುಯೋಧನನ ರಾಜಧಾನಿಯಾದರೆ ನವೀನವಾಗಿ ನಿರ್ಮಿಸಿದ ಇಂದ್ರಪ್ರಸ್ಥವು ಧರ್ಮರಾಯನ ರಾಜಧಾನಿಯಾಯಿತು. ಅರ್ಜುನನು ಸುಭದ್ರೆಯನ್ನು ಅಪಹರಿಸಿ ವಿವಾಹವಾದನು. ವಿಕರ್ಣನ ಕೌರವ ಸಹೋದರರೆಲ್ಲರೂ ವಿವಾಹಿತರಾದರು. ಆದರೆ ವಿಕರ್ಣನು ವಿವಾಹಕ್ಕೊಪ್ಪದೆ ವಿರಾಗಿಯಾಗಿ ಋಷಿ ಸಾದೃಶ್ಯ ಜೀವನವನ್ನು ನಡೆಸುತ್ತಿದ್ದನು. ರಾಜಪೋಷಾಕುಗಳನ್ನೂ ಆಭರಣಗಳನ್ನೂ ತ್ಯಜಿಸಿ ಸಾಮಾನ್ಯವಾದ ದುಕೂಲವನ್ನು ಕಚ್ಚೆಯುಟ್ಟು, ಉತ್ತರೀಯವನ್ನು ಹೊದೆದುಕೊಂಡು ಸಾತ್ವಿಕ ತೇಜಸ್ಸಿನಿಂದ ಘನ ಗಂಭೀರನಾಗಿ ಶೋಭಿಸುತ್ತಿದ್ದನು.

ಸುರಮುನಿ ನಾರದರ ಉಪದೇಶದಂತೆ ಧರ್ಮರಾಯನು ಇಂದ್ರಪ್ರಸ್ಥದಲ್ಲಿ ರಾಜಸೂಯ ಯಾಗವನ್ನು ಕೈಗೊಳ್ಳುವ ಸಂಕಲ್ಪ ಮಾಡಿದನು. ಧರ್ಮರಾಯನ ನಾಲ್ವರು ಸಹೋದರರು ಅಷ್ಟದಿಕ್ಕುಗಳಿಗೂ ವಿಜಯ ಯಾತ್ರೆಯನ್ನು ಮಾಡಿ ರಾಜ-ಮಹಾರಾಜರುಗಳನ್ನು ಸೋಲಿಸಿ ಕಪ್ಪ-ಕಾಣಿಕೆಗಳ ಧನ ಸಂಚಯನ ಮಾಡಿದರು. ದಾನವ ಶಿಲ್ಪಿಯಾದ ಮಯನೆಂಬವನು ಹಲವು ವೈಶಿಷ್ಟ್ಯಗಳಿಂದ ಕೂಡಿದ ಭವ್ಯ ಸಭಾಂಗಣವನ್ನು ಕಟ್ಟಿಸಿಕೊಟ್ಟನು. ಯಾಗ ಪ್ರಾರಂಭಕ್ಕೆ ಮುನ್ನ ಹಲವು ಉತ್ಪಾತಗಳು ಕಂಡು ಬಂದು ಮುಂಬರಲಿರುವ ಅನಿಷ್ಟಗಳಿಗೆ ಮುನ್ಸೂಚನೆಯಾಯಿತು.

ಯಾಗವು ಪ್ರಾರಂಭವಾಯಿತು. ಅಷ್ಟರಲ್ಲಿ ಆಗಮಿಸಿದ ಶ್ರೀಕೃಷ್ಣನಿಗೆ ಪಾಂಡವರು ಅಗ್ರಪೂಜೆಯನ್ನು ಮಾಡಿ ಸತ್ಕರಿಸಿದರು. ಪೂರ್ವ ವೈರದಿಂದ ಇದನ್ನು ಸಹಿಸದ ಶಿಶುಪಾಲನೆಂಬ ಖಳನು ಎದ್ದುನಿಂತು ಶ್ರೀ ಕೃಷ್ಣನು ಈ ಪೂಜೆಗೆ ಅನರ್ಹನೆಂದು ಸಾರಿ ಬಗೆ ಬಗೆಯ ಮಾತುಗಳಲ್ಲಿ ದೇವನನ್ನು ನಿಂದಿಸಿ ಜರೆದನು. ಕೋಪಗೊಂಡ ಭೀಮನು ಶಿಶುಪಾಲನನ್ನು ಕೊಲ್ಲುವೆನೆಂದು ಖಡ್ಗವನ್ನು ಹಿರಿದು ಮುಂದಡಿ ಇಟ್ಟನು. ಭೀಷ್ಮರು ಅವನನ್ನು ತಡೆದು ಶ್ರೀಕೃಷ್ಣನೊಬ್ಬನಿಂದಲೇ ಆತನನ್ನು ಕೊಲ್ಲಲು ಸಾಧ್ಯ ಎಂದು ಸಮಾಧಾನಪಡಿಸಿದರು. ಯಾಗಕ್ಕೆ ಆಗಮಿಸಿದ ಅರಸರಲ್ಲಿ ಹಲವರು ಶಿಶುಪಾಲನ ಪರವಾಗಿಯೂ, ಯಾದವರು ಕೃಷ್ಣನ ಪರವಾಗಿಯೂ ಹೊಯ್-ಕೈಗೆ ಸಿದ್ಧರಾದರು. ಭೀಷ್ಮರು ಅವರನ್ನೆಲ್ಲಾ ತಡೆದು ಶ್ರೀಕೃಷ್ಣನ ಮಹಿಮೆಯನ್ನು ಸಾದ್ಯಂತವಾಗಿ ಬಣ್ಣಿಸಿ ಸ್ತುತಿಸಿ ಕೊಂಡಾಡಿದರು. ಶಿಶುಪಾಲನು ತನ್ನ ಪಟ್ಟನ್ನು ಸಡಿಲಿಸದೆ ಭೀಷ್ಮರನ್ನು ಮೂದಲಿಸಿ ಕೃಷ್ಣನನ್ನು ಯುದ್ಧಕ್ಕೆ ಆಹ್ವಾನಿಸಿದನು. ಯುದ್ಧದಲ್ಲಿ ಕೃಷ್ಣನಿಂದ ಶಿಶುಪಾಲನ ವಧೆಯಾಯಿತು. ಹೀಗೆ ಯಾಗ ಮಧ್ಯದಲ್ಲಿ ರಕ್ತಪಾತವಾದರೂ ಅನಂತರ ವೈಭವದಿಂದ ಸುಸೂತ್ರವಾಗಿ ಕೊನೆಗೊಂಡಿತು. ನೆರೆದಿದ್ದ ರಾಜ-ಮಹಾರಾಜರುಗಳನ್ನೂ, ಋಷಿಗಳನ್ನೂ, ಧೃತರಾಷ್ಟ್ರ-ಭೀಷ್ಮಾದಿಗಳನ್ನೂ ಪಾಂಡವರು ಬೀಳ್ಕೊಂಡರು.

ಕೌರವ ಭೂಪಾಲ ದುರ್ಯೋಧನನನ್ನು ಬೀಳ್ಕೊಡುವ ಮುನ್ನ ಧರ್ಮರಾಯನು ಆತನನ್ನು ತನ್ನ ವೈಭವದ ಸಭಾ ಸ್ಥಾನಕ್ಕೆ ಕರೆಸಿಕೊಂಡನು. ಶಿಲ್ಪಿ ಮಯನು ಕಟೆದ ಹಲವು ಚಮತ್ಕಾರಗಳು ಆ ಸಭಾಂಗಣದಲ್ಲಿದ್ದು ದುರ್ಯೋಧನನನ್ನು ಪೇಚಿಗೆ ಸಿಲುಕಿಸಿದವು. ಒಂದೆಡೆ ದಾರಿಗಡ್ಡವಾಗಿ ಕೊಳವೊಂದು ಇರುವಂತೆ ಭಾಸವಾಗಿ ಕೌರವನು ತನ್ನ ಬಟ್ಟೆಗಳನ್ನು ತೊಡೆಗಳ ತನಕ ಏರಿಸಿಕೊಂಡು ನಡೆಯಲು ಅಲ್ಲಿ ಸ್ಫಟಿಕ ಶುಭ್ರ ನೆಲವೇ ಇದ್ದು ಭ್ರಮೆ ಹುಟ್ಟಿಸಿತು. ಇನ್ನೊಂದೆಡೆ ಬರಿಯ ನೆಲದಂತೆ ಕಾಣಿಸುವಲ್ಲಿ ಕಾಲಿಟ್ಟಾಗ ಅಲ್ಲಿ ಸರೋವರವಿದ್ದು ದುರ್ಯೋಧನನು ಹೊಕ್ಕುಳ ತನಕ ಮುಳುಗಿ ಒದ್ದೆಯಾದನು. ಇನ್ನೂ ಮುಂದುವರಿದಾಗ ತೆರೆದ ಬಾಗಿಲಿನಂತೆ ಕಾಣುವೆಡೆಯಲ್ಲಿ ಬಾಗಿಲಿಲ್ಲದೆ ಗೋಡೆಗೆ ಹಾಯ್ದು ಹಣೆಯಲ್ಲಿ ಬುಗುಟವೆಬ್ಬಿಸಿ ಕೊಂಡನು. ದ್ವಾರ ಎಲ್ಲಿದೆಯೆಂದು ಕಂಡು ಹಿಡಿಯಲಾಗದೆ ಕಂಡ ಕಂಡಲ್ಲೆಲ್ಲಾ ಗೋಡೆಯನ್ನು ಮುಟ್ಟಿ-ಮುಟ್ಟಿ ನೋಡಿ ತಡಕಾಡಿದನು. ಅವನು ಈ ಎಲ್ಲಾ ಎಡವಟ್ಟುಗಳನ್ನು ಮಾಡುತ್ತಿರುವಾಗ ದ್ರೌಪದಿಯೂ ಅವಳ ಅಂತಃಪುರ ಸಖಿಯರೂ ಸೇರಿ ಚಪ್ಪಾಳೆ ತಟ್ಟಿ ಗೇಲಿ ಮಾಡಿದರು. ದುರ್ಯೋಧನನು ಅವಮಾನದಿಂದ ಕ್ರುದ್ಧನಾಗಿ ಹಸ್ತಿನಾವತಿಗೆ ಮರಳಿ ತನ್ನ ಮನದ ಉಮ್ಮಳವನ್ನು ಮಾವ ಶಕುನಿಯೊಂದಿಗೂ ಅನಂತರ ಧೃತರಾಷ್ಟ್ರನೊಡನೆಯೂ ತೋಡಿಕೊಂಡನು.

ಧೃತರಾಷ್ಟ್ರನು ಪಾಂಡವರೊಡನೆ ಮಾತ್ಸರ್ಯದ ಸಂಘರ್ಷ ಬೇಡವೆಂದು ಪರಿಪರಿಯ ಹಿತನುಡಿಗಳಿಂದ ಸುಯೋಧನನಿಗೆ ಹೇಳಿದನು. ಆದರೆ ಆತನು ಇದಕ್ಕೆ ಒಪ್ಪದೆ ಇದ್ದುದರಿಂದ ಈ ದುಷ್ಟತ್ರಯರು ಸೇರಿಕೊಂಡು ಪಾಂಡವರನ್ನು ಕಪಟ ದ್ಯೂತದಲ್ಲಿ ಮಣಿಸುವ ಸಂಚೊಂದನ್ನು ರೂಪಿಸಿದರು. ಧೃತರಾಷ್ಟ್ರನು ಶಿಲ್ಪಿಗಳಿಂದ ವೈಭವೋಪೇತವಾದ ಸಭಾಂಗಣವೊಂದನ್ನು ಕಟ್ಟಿಸಿದನು. ಬಳಿಕ ವಿದುರನನ್ನು ಕರೆಸಿ ಇಂದ್ರಪ್ರಸ್ಥಕ್ಕೆ ತೆರಳಿ ಧರ್ಮಜನನ್ನು ದ್ಯೂತಕ್ಕೆ ಆಹ್ವಾನಿಸುವಂತೆ ಒಡಂಬಡಿಸಿದನು. ವಿದುರನ ಮಾತಿಗೆ ಒಪ್ಪಿ ಧರ್ಮರಾಯನು ತನ್ನ ಸಕಲ ಪರಿವಾರದೊಂದಿಗೆ ಹಸ್ತಿನಾವತಿ ಪುರ ಪ್ರವೇಶ ಮಾಡಿದನು.

ದುಷ್ಟತ್ರಯರ ಕುತಂತ್ರಕ್ಕೆ ಈಡಾಗಿ ಧರ್ಮಜನು ಧರ್ಮಬಾಹಿರವಾದ ದ್ಯೂತವೆಂಬ ವ್ಯಸನಕ್ಕೆ ಮನತೆತ್ತನು. ದುರ್ಯೋಧನನ ಪರವಾಗಿ ಶಕುನಿಯು ಆಡುವುದೆಂಬ ನಿರ್ಣಯಕ್ಕೆ ಬರಲಾಯಿತು. ಶಕುನಿಯ ಕಪಟ ದ್ಯೂತದಲ್ಲಿ ಧರ್ಮಜನು ಧನ, ಕನಕ, ವಸ್ತು, ವಾಹನ, ಗಜ, ತುರಗ, ಚತುರಂಗ ಬಲಗಳೆಲ್ಲವನ್ನೂ ಪಣವಾಗಿಟ್ಟು ಕಳೆದುಕೊಂಡನು. ಕೊನೆಗೆ ದಾಸ-ದಾಸಿಯರು, ಗಣಿಕೆಯರು, ದೇಶ-ಕೋಶಗಳನ್ನೂ ಕಳೆದುಕೊಂಡನು. ''ಅರಸನಾದವನು ದ್ಯೂತವನ್ನು ಆಡುವುದೇ ಅಧರ್ಮ. ಅದರಲ್ಲೂ ವ್ಯಕ್ತಿಗಳನ್ನು ಪಣವಾಗಿಟ್ಟು ಆಡುವುದು ಇನ್ನೂ ಹೆಚ್ಚಿನ ಅಧರ್ಮ'' ಎಂದು ವಿಕರ್ಣನಾಡಿದ ಧರ್ಮ ನೀತಿಯನ್ನೂ ಲೆಕ್ಕಿಸದೆ ತನ್ನ ಸಹೋದರರು ನಾಲ್ವರನ್ನೂ ಒಬ್ಬೊಬ್ಬರನ್ನಾಗಿ ಪಣವಾಗಿಟ್ಟು ಸೋತು ಕೊನೆಗೆ ತನ್ನನ್ನು ತಾನೇ ಪಣಕ್ಕೊಡ್ಡಿದನು. ಅದರಲ್ಲೂ ಸೋತ ಧರ್ಮಜನನ್ನು ಶಕುನಿಯು ಹಂಗಿಸಿ ಉಳಿದಿರುವ ಪಾಂಡವರೈವರ ಮಡದಿ ಪಾಂಚಾಲೆಯನ್ನೇ ಪಣವಿಡುವಂತೆ ಪಂತಾಹ್ವಾನವನ್ನಿತ್ತನು. ಅದಕ್ಕೂ ಮನವನ್ನೊಡ್ಡಿ ಧರ್ಮಜನು ಸತಿಸುಶೀಲೆ ದ್ರೌಪದಿಯನ್ನೂ ಜೂಜಿನಲ್ಲಿ ಸೋತನು. ಸತಿ ಸಹಿತ ಪಾಂಡವರೈವರೂ ಕೌರವನ ತೊತ್ತಿಗರಾದರು.

(ಮುಂದಿನ ಭಾಗವನ್ನು ನಿರೀಕ್ಷಿಸಿರಿ...)

## ''ಹೊತ್ಯಾಕ್ ಹೋತಿಲ್ಲೆ?''

(...5ನೇ ಪುಟದಿಂದ)

ಸೀಟುಗಳನ್ನು ಹುಡುಕಿ ಕುಳಿತೆವು. ಅಲ್ಲಿ ನಮಗೆ ನಮ್ಮ ಆಸನಗಳನ್ನು ತೋರಿಸಲು ನಮ್ಮ ಕೈ ಚೀಲಗಳನ್ನು ಎತ್ತಿ ಮೇಲಿಡಲು ನಗುಮೊಗದ ಸಿಬ್ಬಂದಿಗಳಿದ್ದರು. ನಾವು ಕುಳಿತ ಐದೇ ನಿಮಿಷದಲ್ಲಿ ವಿಮಾನವು ಚಲಿಸಲಾರಂಭಿಸಿತು. ಆಗ ಫ್ರಾನ್ಸ್‌ನ ಸ್ಥಳೀಯ ಸಮಯ ಬೆಳಗಿನ 10-40. ನಮ್ಮ ಕೈಗಡಿಯಾರವು ಮಧ್ಯಾಹ್ನದ 2 ಗಂಟೆ ತೋರಿಸುತ್ತಿತ್ತು.

ಅಂದರೆ ನಮಗೂ ಫ್ರಾನ್ಸ್ ದೇಶದ ಸಮಯಕ್ಕೂ 3-30 ಗಂಟೆಗಳಷ್ಟು ವ್ಯತ್ಯಾಸ! ವಿಮಾನದೊಳಗಿರುವ ಸಿಬ್ಬಂದಿಯನ್ನು ಬಿಟ್ಟು ಪ್ಯಾರಿಸ್ ನಿಲ್ದಾಣದಲ್ಲಿ ಫ್ರೆಂಚ್ ಭಾಷೆಯನ್ನುಳಿದು ಇಂಗ್ಲಿಷ್ ಬಲ್ಲ ಸಿಬ್ಬಂದಿಗಳ ಸಂಖ್ಯೆ ತುಂಬಾ ಕಡಿಮೆ. ಫಲಕಗಳೆಲ್ಲಾ ಇಂಗ್ಲಿಷ್ ಅಕ್ಷರಗಳಲ್ಲಿದ್ದುದೇ ವಿನಹ ಭಾಷೆ ಮಾತ್ರ ಫ್ರೆಂಚ್!

ಪ್ಯಾರಿಸ್‌ನಿಂದ ಹೊರಟ ವಿಮಾನವು ಬ್ರಿಟಿಷ್ ದ್ವೀಪಗಳ ಮೇಲಿಂದ ಹಾದು ಅಟ್ಲಾಂಟಿಕ್ ಮಹಾಸಾಗರದ ಮೇಲಿಂದ ಹಾರತೊಡಗಿತು.

ಕೆಳಗಡೆ ಇಣುಕಿದರೆ ಎತ್ತೆತ್ತಲೂ ನೀಲ ಸಾಗರ! ಪ್ರಕ್ಷುಬ್ಧ ಅಲೆಗಳು! ಭೂಭಾಗದ ದರ್ಶನವೇ ಇಲ್ಲ! (ನಾವು ಅಮೇರಿಕಾ ತಲುಪಿ ಮೂರು ದಿನಗಳಲ್ಲಿ ಬ್ರೆಜಿಲ್‌ನಿಂದ ಹೊರಟು ಪ್ಯಾರಿಸ್‌ಗೆ ಹೋಗುವ 228 ಮಂದಿ ಪ್ರಯಾಣಿಕರಿದ್ದ ಫ್ರೆಂಚ್ ವಿಮಾನವೊಂದು ಇದೇ ಸಾಗರದಲ್ಲಿ ಬಿದ್ದು ಜಲಸಮಾಧಿಯಾಗಿತ್ತು!) ಸಮುದ್ರದ ಮೇಲಿಂದ ಗಂಟೆಗಟ್ಟಲೆ ಹಾರಾಟ! ನಮ್ಮ ಕೈಗಡಿಯಾರದಲ್ಲಿ ಮಧ್ಯಾಹ್ನ 2ಕ್ಕೆ ಪ್ಯಾರೀಸ್‌ನಿಂದ ಹೊರಟ ವಿಮಾನವು 2, 4, 6, 8 ಹೀಗೆ ಗಂಟೆಗಳನ್ನು ತೋರಿಸುತ್ತಾ ಇತ್ತು. ಆದರೆ ಸೂರ್ಯ ಮುಳುಗುವ ಸೂಚನೆಯೇ ಕಾಣುತ್ತಿಲ್ಲ! ಪೂರ್ತಿ ಹಗಲೇ ಹಗಲು! ನನ್ನ ಕೈಗಡಿಯಾರದಲ್ಲಿ (ಭಾರತೀಯ ಸಮಯ) 8 ಗಂಟೆ ತೋರಿಸುವಾಗ (ಭಾರತದಲ್ಲಿ ರಾತ್ರಿ) ಅಲ್ಲಿ ಸಮಯವೆಷ್ಟೆಂದು ವಿಚಾರಿಸಿದೆ. ಆಗ ಬೆಳಗಿನ 11 ಗಂಟೆಯೆಂತಲೂ, ಅಮೇರಿಕಾ ತಲುಪಲು ಇನ್ನೂ ಮೂರುವರೆ ಗಂಟೆ ಬೇಕೆಂತಲೂ ಗೊತ್ತಾಯಿತು. ಇಲ್ಲಿ ಒಂದು ತಮಾಷೆಯೆಂದರೆ ಬೆಳಿಗಿನ 10-40ಕ್ಕೆ (ಸ್ಥಳೀಯ ಸಮಯ) ಪ್ಯಾರೀಸ್‌ನಿಂದ ಹೊರಟ ವಿಮಾನವು ಮಧ್ಯಾಹ್ನ 2 ಗಂಟೆಗೆ (ಅಮೇರಿಕಾದ ಸ್ಥಳೀಯ ಸಮಯ) ಅಟ್ಲಾಂಟಾ ತಲುಪುವುದೆಂದು ತಿಳಿದಿದ್ದೆ. ಹಾಗಾದರೆ ಕೇವಲ ಮೂರುವರೆ ಗಂಟೆಗಳ ಪ್ರಯಾಣವೆಂದು ನಾನು ಹಿಗ್ಗಿದ್ದೆ. ಆದರೆ ಅಮೇರಿಕಾದಲ್ಲಿ ಮಧ್ಯಾಹ್ನ 2 ಗಂಟೆ ಸರಿ, ಸೂರ್ಯನು ಮುಂದೆ ಚಲಿಸದೆಯೇ ನಮ್ಮೊಂದಿಗೆ ಇದ್ದಾನೆಂದೂ, ನಮ್ಮ ಪ್ರಯಾಣಕ್ಕೂ ಸೂರ್ಯನ ಪ್ರಯಾಣಕ್ಕೂ ಸ್ಪರ್ಧೆಯೆಂದೂ ಆಗ ತಿಳಿಯಿತು. ಪ್ಯಾರಿಸ್‌ನಿಂದ ಬೆಳಿಗಿನ ಜಾವ 10-40ಕ್ಕೆ (ಭಾರತೀಯ ಸಮಯ ಅಪರಾಹ್ನ 2-00) ಹೊರಟ ವಿಮಾನವು ನಿರಂತರ 10 ತಾಸುಗಳ ಹಾರಾಟದ ನಂತರ ಅಟ್ಲಾಂಟದ ಸ್ಥಳೀಯ ಸಮಯ 2ಕ್ಕೆ ಅಟ್ಲಾಂಟದ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಯಿತು. ಆಗ ಭಾರತೀಯ ಸಮಯ 11-54 ರಾತ್ರಿ (ದಿನಾಂಕ 24-5-2009, ಆದರೆ ರಾತ್ರಿಯಾಗಿರಲಿಲ್ಲ!) ಕಾರಣ ನಾವು ಸೂರ್ಯನೊಂದಿಗೇ ಬಂದಿದ್ದೆವು! ಅಂದರೆ ಪ್ಯಾರಿಸ್ ಸಮೀಪ ಬೆಳಗಾದ ನಂತರ ನಿರಂತರ 12 ತಾಸುಗಳ ಕಾಲ ಹಗಲಿದ್ದರೂ ಅಟ್ಲಾಂಟದಲ್ಲಿ ಇಳಿಯುವಾಗ ಅಪರಾಹ್ನ 2 ಗಂಟೆ ಮಾತ್ರ. ಇಲ್ಲಿ ನಮ್ಮನ್ನು ಕಾಡಿದ ಚಿಂತೆಯೆಂದರೆ ಸೂರ್ಯನೇಕೆ ಚಲಿಸುವುದಿಲ್ಲ? ಹೊತ್ಯಾಕ್ ಹೋತ್ತಿಲ್ಲೆ? ಎಂಬುದು. ಅಪರಾಹ್ನ 2ಕ್ಕೆ ಅಟ್ಲಾಂಟ ನಿಲ್ದಾಣದಲ್ಲಿಳಿದ ನಮಗೆ ಓಡಾಡಲು ನಮ್ಮ ಸೂಚನೆಯ ಮೇರೆಗೆ ಗಾಲಿ ಕುರ್ಚಿ (Wheel Chair) ಏರ್ಪಾಡಾಗಿತ್ತು. ನಡೆಯುವ ತೊಂದರೆಯಿಲ್ಲವೆಂದು ಸಂತಸದಿಂದಲೇ ಗಾಲಿ ಕುರ್ಚಿಗಳನ್ನೇರಿ ಕುಳಿತೆವು. ಆದರೆ ನಮ್ಮ ದುರದೃಷ್ಟಕ್ಕೆ ಅದನ್ನು ತಳ್ಳುವ ಸಿಬ್ಬಂದಿ ಮಾತ್ರ ತುಂಬಾ ಸಮಯ ಬರದೇ ನಾವು ಕಾಯಬೇಕಾಯಿತು. ಕೊನೆಗೊಮ್ಮೆ ಒಬ್ಬ ದಾಂಡಿಗ ನಮ್ಮಿಬ್ಬರ ಎರಡೂ ಗಾಲಿ ಕುರ್ಚಿಗಳನ್ನೂ ಒಬ್ಬನೇ ತಳ್ಳಿ ನಮ್ಮ ಲಗೇಜುಗಳಿರುವಲ್ಲಿ ತಂದನು. ಬೆಂಗಳೂರಿನಲ್ಲಿ ನಾವು ಹಾಕಿ ಬಿಟ್ಟಿದ್ದ ಲಗೇಜುಗಳು ನಮಗಿಂತ ಮೊದಲೇ ಅಲ್ಲಿ ಬಂದು ಜಮೆಯಾಗಿ ನಮ್ಮನ್ನು ಕಾಯುತ್ತಿದ್ದವು. ಈ ಮಧ್ಯೆ ಪ್ರಯಾಣ ಕಾಲದಲ್ಲಿ ಪ್ಯಾರಿಸ್‌ನಿಂದ ಹೊರಟಾಗ ಒಮ್ಮೆ ಅಟ್ಲಾಂಟ ಸಮೀಪಿಸುವಾಗ ಒಮ್ಮೆ ಅನ್ನ, ಸಾಂಬಾರು, ಬ್ರೆಡ್, ಹಣ್ಣು, ಕಾಫಿ-ಇತ್ಯಾದಿಗಳ ಊಟವಾಗಿತ್ತು. ವಲಸು ಅಧಿಕಾರಿಗಳು (immigration), ರಹದಾರಿ ಅಧಿಕಾರಿಗಳು (Passport and Visa) ಇವರೆಲ್ಲರ ತಪಾಸಣೆಗಳನ್ನು ಮುಗಿಸಿ ನಮ್ಮ ಗಾಲಿ ಕುರ್ಚಿಯ ರೈಲನ್ನೇರಿ 8 ಸ್ಟೇಷನ್‌ಗಳಲ್ಲಿ ನಿಂತು ಕೊನೆಯದಾಗಿ ನನ್ನ ಮಗ ಸುದೀಪ್, ಸೊಸೆ ಛಾಯಾ ಮತ್ತು ಮೊಮ್ಮಗ ಸುಮಿತ್ ಇವರುಗಳು ಕಾಯುತ್ತಿದ್ದ ಸ್ಥಳಕ್ಕೆ ಬಂದಾಗ ಅಲ್ಲಿನ ಸಮಯದಲ್ಲಿ ಸಂಜೆ ಗಂಟೆ 4-30. ನಮ್ಮ ಕೈ ಗಡಿಯಾರ ಮಧ್ಯರಾತ್ರಿಯ ಸಮಯ 2 ಗಂಟೆ ತೋರಿಸುತ್ತಿತ್ತು. ಅಲ್ಲಿನ ಮಧ್ಯಾಹ್ನ ಗಂಟೆ 1ರಿಂದ ಕಾಯುತ್ತಿದ್ದ ಮಗ, ಸೊಸೆ, ಮೊಮ್ಮಗರೊಂದಿಗೆ ಕಾರಿನಲ್ಲಿ ಲಗೇಜುಗಳನ್ನಿಟ್ಟುಕೊಂಡು 25 ಮೈಲಿಗಳ ದೂರದಲ್ಲಿರುವ ಮಗನ ಮನೆಯನ್ನು ತಲುಪಿದೆವು. ಆಗ ಸಂಜೆ ಗಂಟೆ 5. ಅಲ್ಲಿಯೂ ಅಷ್ಟೆ ಸಂಜೆ 6, 7, 8 ಕಳೆದರೂ ಬಿಸಿಲೇ ಬಿಸಿಲು! ಸಂಪೂರ್ಣ ರಾತ್ರಿಯಾಗುವಾಗ ಗಂಟೆ 9-30. ಅಂತೂ ಬೆಳಿಗ್ಗೆ ಗಂಟೆ 6ರಿಂದ ರಾತ್ರಿ 9ರ ವರೆಗಿನ 15-20 ತಾಸುಗಳ ಸುದೀರ್ಘ ಹಗಲು ಈಗ ಇಲ್ಲಿದೆ! ಇಲ್ಲಿಯೂ ಸೂರ್ಯನ ಚಲನೆ ನಿಧಾನ- ''ಹೊತ್ತೇ ಹೋತ್ತಿಲ್ಲೆ!'' ಬೆಂಗಳೂರಿನಿಂದ ಅಟ್ಲಾಂಟಾ ವಾಯುಮಾರ್ಗದಲ್ಲಿ ಸಾಮಾನ್ಯ 14,200 ಕಿ.ಮೀ.ಗಳಷ್ಟು ದೂರ. ಇಲ್ಲಿನ ಉಷ್ಣತೆ ವಾತಾವರಣದಲ್ಲಿ $16^{0}$ಸೆಂಟಿಗ್ರೇಡ್ ಅಂದರೆ $40^{0}$ರಿಂದ $50^{0}$ಫ್ಯಾರನ್‌ಹೀಟ್

-ಮ.ನಾ.ಹೆಬ್ಬಾರ್, ಅಟ್ಲಾಂಟಾ, ಅಮೇರಿಕಾ

## ಮಾಂಗಲ್ಯಂ ತಂತುನಾನೇನ ....

ಅನಾರು ವಸಂತಕುಮಾರ್‌ರವರ ಪುತ್ರ **ಸಚಿನ್** ಹಾಗೂ ಪಾದೆಬೆಟ್ಟು ಶ್ರೀ ದೇವರಾಯ ಶರ್ಮ ಮತ್ತು ಶ್ರೀಮತಿ ವಿಜಯಲಕ್ಷ್ಮಿಯವರ ಪುತ್ರಿ **ಅರ್ಚನಾ** ಇವರ ವಿವಾಹವು ತಾ.24-09-2009 ಸುರತ್ಕಲ್ ಹೊಸಬೆಟ್ಟು ನವಗಿರಿ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★

ಶ್ರೀಮತಿ ಮತ್ತು ಶ್ರೀ ಎಸ್. ಮೋಹನ ರಾಯರ ಪುತ್ರ **ಯೋಗೀಶ** ಹಾಗೂ ಶ್ರೀಮತಿ ಸುಶೀಲಮ್ಮ ಮತ್ತು ಶ್ರೀ ಸುಬ್ರಹ್ಮಣ್ಯರವರ ಪುತ್ರಿ **ಸುಧಾಶ್ರೀ** ಇವರ ವಿವಾಹವು ತಾ.05-10-2009 ರಂದು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ 'ಶಾರದ್ವತ ಯಜ್ಞಾಂಗಣ'ದಲ್ಲಿ ನೆರವೇರಿತು.

★★★★

ಶ್ರೀಮತಿ ಶಕುಂತಳಾ ಮತ್ತು ಡಾ। ಯಾಜಿ ಎಚ್. ನಿರಂಜನ ಭಟ್ಟರ ಪುತ್ರಿ **ವಿದ್ಯಾಶ್ರೀ** ಹಾಗೂ ಶ್ರೀಮತಿ ಮೃಣಾಲಿನಿ ಮತ್ತು ಕುಡುಪು ಶ್ರೀ ವಿಜಯಕುಮಾರ್ ಇವರ ಪುತ್ರ **ವಿಕ್ರಮ್** ಇವರ ವಿವಾಹವು ತಾ.08-10-2009 ರಂದು ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ನೆರವೇರಿತು.

★★★★

ಮೈಸೂರಿನಲ್ಲಿರುವ ಶ್ರೀಮತಿ ಪ್ರವೀಣ ಮತ್ತು ಶ್ರೀ ಲಕ್ಷ್ಮೀಕಾಂತ ರಾವ್‌ರವರ ಪುತ್ರಿ **ತೃಪ್ತಿ** ಹಾಗೂ ದಿ। ಇನ್ನ ಕೇದಗೆ ಸುಬ್ರಹ್ಮಣ್ಯ ಮತ್ತು ಶ್ರೀಮತಿ ಪ್ರೇಮರವರ ಪುತ್ರ **ಶಶಿಕಿರಣ್** ಇವರ ವಿವಾಹವು ತಾ.08-10-2009ರಂದು ಚಿಕ್ಕಮ್ಮ ನಿಕೇತನ ಕಮ್ಯೂನಿಟಿ ಹಾಲ್, ಕುವೆಂಪುನಗರ, ಮೈಸೂರು ಇಲ್ಲಿ ನೆರವೇರಿತು.

★★★★

ಶ್ರೀಮತಿ ಸರಸ್ವತಿ ಮತ್ತು ಶ್ರೀ ಪ್ರಭಾಕರ ಶ್ಯಾನುಭೋಗರ ಪುತ್ರಿ **ಗೀತಾ** ಹಾಗೂ ಶ್ರೀಮತಿ ಸುಗುಣ ಮತ್ತು ಶ್ರೀ ಕಮಲಾಕರ ಶ್ಯಾನುಭೋಗರ ಪುತ್ರ **ಪ್ರಸಾದ್** ಇವರ ವಿವಾಹವು ತಾ.04-10-09 ರಂದು ಮಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ನೆರವೇರಿತು.

### ಕು। ಸಹನಾ ರಾವ್



2009ರ ಮೇ ತಿಂಗಳಲ್ಲಿ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸಿದ ಕರ್ನಾಟಕ ಶಾಸ್ತ್ರೀಯ ಸಂಗೀತ ಪರೀಕ್ಷೆಯ ಜೂನಿಯರ್ ವಿಭಾಗದಲ್ಲಿ ಶೇಕಡಾ 87 ಅಂಕಗಳೊಂದಿಗೆ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿರುವ ಕು। ಸಹನಾ ರಾವ್ ಪುತ್ತೂರಿನ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ 7ನೇ ತರಗತಿಯ ವಿದ್ಯಾರ್ಥಿನಿ. ಇವರು ಸಂತ ಫಿಲೋಮಿನಾ ಕಾಲೇಜಿನ ಪ್ರಾಧ್ಯಾಪಕ ಪ್ರೊ। ದಿನಕರ ರಾವ್ ಹಾಗೂ ಶ್ರೀಮತಿ ವಾಣಿ ಇವರ ಸುಪುತ್ರಿ, ಹಾಗೂ ಪಳ್ಳಿಗುಡ್ಡೆ ಶ್ರೀ ನಾರಾಯಣ ರಾವ್ ಮತ್ತು ಶ್ರೀಮತಿ ಸಾವಿತ್ರಮ್ಮ ಇವರ ಪೌತ್ರಿ.

### ತುಲಾ ಮಾಸ ವಿಶೇಷ ದಿನಗಳು

| | |
|---|---|
| 17-10-2009 | ತುಲಾ ಸಂಕ್ರಮಣ |
| | ನರಕಚತುರ್ದಶಿ |
| | ಬಲೀಂದ್ರ ಪೂಜಾ |
| 18-10-2009 | ಅಮಾವಾಸ್ಯ-ಗೋಪೂಜಾ |
| 19-10-2009 | ತುಲಸೀ ಪೂಜಾರಂಭ |
| 23-10-2009 | ಸ್ವಾತೀ ನಕ್ಷತ್ರಾರಂಭ |
| 29-10-2009 | ಸರ್ವೈಕಾದಶೀ |
| 30-10-2009 | ಉತ್ಥಾನ ದ್ವಾದಶೀ |
| 31-10-2009 | ಪ್ರದೋಷಃ |
| 02-11-2009 | ಪೂರ್ಣಿಮಾ |
| 05-11-2009 | ಸಂಕಷ್ಟ ಚತುರ್ಥಿ |
| | ಚಂದ್ರೋದಯ ರಾತ್ರಿ, ಗಂ.8.26ಕ್ಕೆ |
| 06-11-2009 | ವಿಶಾಖಾ ನಕ್ಷತ್ರಾರಂಭ |
| 12-11-2009 | ಸ್ಮಾರ್ತೈಕಾದಶೀ |
| 13-11-2009 | ಭಾಗವತೈಕಾದಶೀ |
| 14-11-2009 | ಪ್ರದೋಷಃ |
| 16-11-2009 | ವೃಶ್ಚಿಕ ಸಂಕ್ರಮಣ, ಅಮಾವಾಸ್ಯ |

## ಅಭಿನಂದನೆ

### ಕು। ನೇಹಾ ಎನ್. ರಾವ್



ಮಹಾರಾಷ್ಟ್ರದ ನಾಸಿಕ್‌ನ BYK Collegeನ ಪ್ರಥಮ ಪಿಯುಸಿ ವಿದ್ಯಾರ್ಥಿನಿ ಕು। ನೇಹಾ ಎನ್. ರಾವ್ ಕರ್ನಾಟಕ ಸಂಗೀತ ಪ್ರಾಥಮಿಕ ಹಂತ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾರೆ. ಇವರು ಮಹಾರಾಷ್ಟ್ರದ ನಾಸಿಕ್‌ನ ಶ್ರೀ ನಾರಾಯಣ್ ರಾವ್ ಮತ್ತು ಶ್ರೀಮತಿ ವಿದ್ಯಾ ನಾರಾಯಣ ರಾವ್ ಇವರ ಸುಪುತ್ರಿ ಹಾಗೂ ಉಡುಪಿ ಚಿಟ್ಪಾಡಿಯ ಭುಜಂಗ ರಾವ್‌ರವರ ಮೊಮ್ಮಗಳು.

### ಕು। ಅಂಕಿತ ಸಿ. ಎಸ್. ರಾವ್



ಮಹಾರಾಷ್ಟ್ರದ ನಾಸಿಕ್‌ನ Sliver Oak Schoolನ 9ನೇ ತರಗತಿಯಲ್ಲಿ ಕಲಿಯುತ್ತಿರುವ ಕು। ಅಂಕಿತ ಸಿ. ಎಸ್. ರಾವ್ ಕರ್ನಾಟಕ ಸಂಗೀತ ಪ್ರಾಥಮಿಕ ಹಂತ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾರೆ. ಇವರು ಮಹಾರಾಷ್ಟ್ರದ ನಾಸಿಕ್‌ನ ಶ್ರೀ ಚಂದ್ರಶೇಖರರಾವ್ ಮತ್ತು ಶ್ರೀಮತಿ ಭಾರತಿ ಸಿ. ರಾವ್ ಇವರ ಸುಪುತ್ರಿ ಹಾಗೂ ಉಡುಪಿ ಚಿಟ್ಪಾಡಿಯ ಭುಜಂಗ ರಾವ್‌ರವರ ಮೊಮ್ಮಗಳು.

### ಮಾ। ಶಾಕ್ಪಾತ್ ರಾವ್



ಮಹಾರಾಷ್ಟ್ರದ ನಾಸಿಕ್‌ನ Don Bosko High Schoolನ 10ನೇ ತರಗತಿಯಲ್ಲಿ ಕಲಿಯುತ್ತಿರುವ ಮಾ। ಶಾಕ್ಪಾತ್ ರಾವ್ ಕರ್ನಾಟಕ ಸಂಗೀತ ಪ್ರಾಥಮಿಕ ಹಂತ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದಾರೆ. ಇವರು ಮಹಾರಾಷ್ಟ್ರದ ನಾಸಿಕ್‌ನ ಶ್ರೀ ವೈ. ಸೋಮಶೇಖರ ರಾವ್ ಮತ್ತು ಶ್ರೀಮತಿ ಶಶಿಕಲ ವೈ. ಎಸ್. ರಾವ್ ರವರ ಸುಪುತ್ರ ಹಾಗೂ ಕುಂಜಾರುಗಿರಿಯ ದಿ। ಗುಂಡುರಾಯರ ಮೊಮ್ಮಗ.

ಸಂಗೀತ ಕ್ಷೇತ್ರದಲ್ಲಿ ಪ್ರಸಿದ್ಧರಾಗಿರುವ ಸಂಗೀತ ವಿದ್ವಾನ್ ದಿ। ಬಿ. ಭುಜಂಗರಾವ್ ಮತ್ತು ಅವರ ಧರ್ಮಪತ್ನಿ ವಿದುಷಿ ದಿ। ಶ್ರೀಮತಿ ಶಾಂತಾ ಭುಜಂಗರಾವ್ ಸಾವಿರಾರು ವಿದ್ಯಾರ್ಥಿಗಳಿಗೆ ಹಾಡುಗಾರಿಕೆ ಮತ್ತು ವಾದ್ಯ ಸಂಗೀತ ಕಲಿಸಿರುವ ಮಹಾನ್ ಕಲಾವಿದರು. ಅವರ ಸುಪುತ್ರ ಶ್ರೀ ಪ್ರಕಾಶ್ ರಾವ್ ಕೆಲವು ವರ್ಷಗಳಿಂದ 'ಶಾಂತಾಲಯ' ಸಂಗೀತ ಸಂಸ್ಥೆಯನ್ನು ನಡೆಸಿಕೊಂಡು ಹಲವಾರು ಸಂಘ, ಸಂಸ್ಥೆ, ಶಾಲಾ ಕಾಲೇಜು ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಸಂಗೀತ ಕಾರ್ಯಕ್ರಮ ನೀಡುತ್ತಿದ್ದಾರೆ. ಪ್ರತಿ ವರ್ಷ ಮೇ, ಜೂನ್ ತಿಂಗಳಲ್ಲಿ ಕರ್ನಾಟಕ ಸರಕಾರ ನಡೆಸುತ್ತಿರುವ ಸಂಗೀತ, ತಾಳವಾದ್ಯ ಪರೀಕ್ಷೆ ಕಟ್ಟಲು ತರಬೇತಿ ನೀಡುತ್ತಿದ್ದಾರೆ. ಹಲವು ಮಕ್ಕಳು 'ಶಾಂತಾಲಯ' ಸಂಗೀತ ಸಂಸ್ಥೆಯ ಮುಂದಾಳತ್ವದಲ್ಲಿ ಈ ಪರೀಕ್ಷೆಯಲ್ಲಿ ಭಾಗವಹಿಸಿ 100% ಉತ್ತೀರ್ಣದೊಂದಿಗೆ ಉತ್ತಮ ಅಂಕಗಳನ್ನು ಗಳಿಸುತ್ತಿದ್ದಾರೆ. ಶ್ರೀ ಪ್ರಕಾಶ್ ರಾವ್ ಮತ್ತು ಕು। ದಿಶಾಲತಾ ರಾವ್ ಇವರ ಮಾರ್ಗದರ್ಶನದಲ್ಲಿ ಸಂಗೀತ ಜೂನಿಯರ್ ಪರೀಕ್ಷೆಯಲ್ಲಿ ಹಾಜರಾದ ನಮ್ಮ ಸಮಾಜದ ಹೊರರಾಜ್ಯದ ಕು। ನೇಹಾ ರಾವ್, ಕು। ಅಂಕಿತ ರಾವ್, ಮಾ। ಶಾಕ್ಪಾತ್‌ರಾವ್ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಇವರೆಲ್ಲರಿಗೂ ಶ್ರೀಶಾರದಾ ಬಳಗದ ಅಭಿನಂದನೆಗಳು.

### ಕೆ. ಚೇತನ್ ರಾವ್



### ಫ್ರಾನ್ಸ್‌ಗೆ ಪ್ರಯಾಣ

ಬೆಂಗಳೂರಿನ ಸೋನೋ ವಿಶನ್ ಓಟೋಸ್ (SONO VISION AETOS) ಕಂಪೆನಿಯಲ್ಲಿ ಉದ್ಯೋಗದಲ್ಲಿರುವ ಕೆ. ಚೇತನ್ ರಾವ್, ಕಂಪೆನಿ ನಿಯೋಜಿಸಿದ ಪ್ರಾಜೆಕ್ಟ್ ಕೆಲಸದ ಮೇಲೆ ಫ್ರಾನ್ಸ್‌ಗೆ ತೆರಳಲಿದ್ದು ಎರಡು ತಿಂಗಳು ಅಲ್ಲಿರುತ್ತಾರೆ. ನಿಟ್ಟೆ ಮಹಾಲಿಂಗ ಅಡ್ಯಂತಾಯ ಮೆಮೋರಿಯಲ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವಿ ಪಡೆದಿರುವ ಅವರು ಅಂಬಲಪಾಡಿಯಲ್ಲಿರುವ, ಮೂಲತಃ ಪುತ್ತೂರಿನವರಾದ ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿ ಕೆ. ನಿರಂಜನ್‌ರಾವ್-ಶಾಲಿನಿ ದಂಪತಿಗಳ ಪುತ್ರ. ಪ್ರಸಕ್ತದ ನಿಯೋಜನೆಯಂತೆ ಎರಡು ತಿಂಗಳು ಫ್ರಾನ್ಸ್‌ನಲ್ಲಿದ್ದು ದಶಂಬರದಲ್ಲಿ ಮರಳಿ ಬರಲಿರುವ ಕೆ. ಚೇತನ್ ರಾವ್‌ರವರ ವಿದೇಶ ಪ್ರವಾಸ ಯಶಸ್ವಿಯಾಗಲೆಂದು ಶ್ರೀಶಾರದಾ ಹಾರೈಸುತ್ತದೆ.

### ವಿದೇಶ ಪ್ರವಾಸ

ನಮ್ಮ ಸಂಘದ ಅಧ್ಯಕ್ಷರಾದ ಶ್ರೀಯುತ ಸಿ.ಎಸ್.ರಾವ್ ಇವರು ಪತ್ನಿ ಶ್ರೀಮತಿ ಸುನಂದರವರೊಂದಿಗೆ ಚೀನಾದಲ್ಲಿರುವ ತನ್ನ ಮಗ ಮತ್ತು ಸೊಸೆಯ ಮನೆಗೆ ತೆರಳಿದ್ದು ಬೀಜಿಂಗ್, ಶಾಂಘಾ, ಬ್ಯಾಂಕಾಕ್ ಪಟ್ಟಣಗಳನ್ನು ಸಂದರ್ಶಿಸಿ ಒಂದು ತಿಂಗಳ ಪ್ರವಾಸವನ್ನು ಮುಗಿಸಿ ಸ್ವದೇಶಕ್ಕೆ ಮರಳಿದ್ದಾರೆ.

### ವಿಳಾಸ ಬದಲಾವಣೆ

**ಶ್ರೀಮತಿ ಚಂದ್ರಮಣಿ ಶಶಿಕಾಂತ ರಾವ್**
'ಸೌಪರ್ಣಿಕಾ',
C/o ಕೃಷಿ ಏಜನ್ಸೀಸ್,
ಆಲಂಕಾರು ಪೋಸ್ಟ್,
ಪುತ್ತೂರು ತಾಲೂಕು - 574 285.

**ಶ್ರೀ ವಾಗೀಶ ಶಾಸ್ತ್ರಿ**
'ವನಸುಮ', ಶ್ರೀ ದುರ್ಗಾಪರಮೇಶ್ವರಿ
ದೇವಸ್ಥಾನದ ಬಳಿ,ಪುತ್ತೂರು,
ಉಡುಪಿ-576105. ಫೋನ್ : 2003301
ಮೊಬೈಲ್ : 9449591513

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

ಡಾ। ವೈ. ಸುದರ್ಶನ ರಾವ್

**ಪ್ರಶ್ನೆ : ಅಪೆಂಡಿಸೈಟಿಸ್ ಎಂದರೇನು?**

**ಉತ್ತರ :** ಅಪೆಂಡಿಕ್ಸ್ ಜೀರ್ಣಾಂಗವ್ಯೂಹದ ಒಂದು ಭಾಗ. ಇದು ಸಣ್ಣ ಕರುಳು ಕೊನೆಗೊಂಡು ದೊಡ್ಡ ಕರುಳು ಆರಂಭವಾಗುವಲ್ಲಿ ಕರುಳಿನಿಂದ ಕಿರುಬೆರಳೊಂದು ಹೊರಚಾಚಿರುವಂತೆ ಕಾಣಿಸುವ ರೀತಿ ಇರುತ್ತದೆ. ಈ ಅಂಗವು ಮೊಲಗಳಲ್ಲಿ ಹುಲ್ಲನ್ನು ಜೀರ್ಣಿಸುವ ಸ್ರಾವಗಳನ್ನು ಸ್ರವಿಸುವ ಕೆಲಸ ಮಾಡುತ್ತದೆ ಹಾಗೂ ಸುಮಾರು ಒಂದು ಅಡಿ ಉದ್ದವಿರುತ್ತದೆ. ಮನುಷ್ಯನಲ್ಲಿ ಈ ಅಂಗಕ್ಕೆ ಏನೂ ಕೆಲಸವಿಲ್ಲದಿರುವುದರಿಂದ ಸಣ್ಣ ಗಾತ್ರದ್ದಾಗಿರುತ್ತದೆ. ಅಷ್ಟೇ ಅಲ್ಲದೆ ಈ ಅಂಗವು ಇಲ್ಲದಿದ್ದರೂ ದೇಹಕ್ಕೇನು ತೊಂದರೆಯಾಗುವುದಿಲ್ಲ. ಕೆಲವೊಮ್ಮೆ ಈ ಅಂಗವು ಜೀವಿ (Micro Organisms)ಗಳಿಂದಾಗಲಿ ಅಥವಾ ಕ್ರಿಮಿಬಾಧೆಯಿಂದಾಗಲಿ ಊದಿಕೊಂಡು ಅದರೊಳಗೆ ಕೀವು ತುಂಬಿಕೊಳ್ಳುವುದನ್ನು ಅಪೆಂಡಿಸೈಟಿಸ್ ಎನ್ನುತ್ತೇವೆ. ಈ ಖಾಯಿಲೆಯು ಹೆಚ್ಚಾಗಿ 35 ವರ್ಷಕ್ಕಿಂತ ಕೆಳಗಿನವರಲ್ಲೂ, ಮಾಂಸಾಹಾರಿಗಳಲ್ಲೂ ಸಾಮಾನ್ಯವಾಗಿರುತ್ತದೆ.

**ಈ ಕಾಯಿಲೆಯ ಚಿಹ್ನೆಗಳು :**

- ಒಮ್ಮೆಲೆ ಆರಂಭವಾಗುವ ತೀವ್ರತರಹದ ಹೊಟ್ಟೆನೋವು, ಕೆಲ ಹೊಟ್ಟೆಯ ಬಲಭಾಗದಲ್ಲಿರುವುದು. ಇದು ಈ ಖಾಯಿಲೆಯ ವಿಶೇಷ ಚಿಹ್ನೆ. ಕೆಲವೊಮ್ಮೆ ಹೊಕ್ಕುಳ ಸುತ್ತ ಆರಂಭವಾಗಿ ನಂತರ ಬಲಭಾಗದಲ್ಲಿ ಮಾತ್ರ ಇರುತ್ತದೆ. ಈ ನೋವು ಅಪರೇಶನ್ ಹಂತಕ್ಕೆ ತಲುಪಲು 5-6 ಗಂಟೆಗಳೂ ಸಾಕು.
- ವಾಂತಿ, ಭೇದಿ ಹಾಗೂ ಜ್ವರ
- ಕೆಲವೊಮ್ಮೆ ಪದೇ ಪದೇ ಹಾಗೂ ಸತತವಾಗಿ ಸಣ್ಣಗೆ ಕಾಡುವ ಹೊಟ್ಟೆನೋವು ಅಪೆಂಡಿಸೈಟಿಸ್‌ನಿಂದಿರಬಹುದು.

ರಕ್ತ ಪರೀಕ್ಷೆ, ಎಕ್ಸ್-ರೇ, ಸ್ಕ್ಯಾನಿಂಗ್‌ಗಳ ಮುಖಾಂತರ ಈ ಕಾಯಿಲೆಯನ್ನು ಖಚಿತಪಡಿಸಿಕೊಳ್ಳಬಹುದು. ಆದರೂ ರೋಗನಿದಾನದಲ್ಲಿ (diagnosis) ಈ ಎಲ್ಲಾ ಪರೀಕ್ಷೆಗಳ ವರದಿಗಿಂತ ತಜ್ಞ ವೈದ್ಯರ ಅಭಿಪ್ರಾಯವೇ ಮುಖ್ಯವಾದುದು.

**ಚಿಕಿತ್ಸೆ :**

ಅಪೆಂಡಿಸೈಟಿಸ್ ಕಾಯಿಲೆಗೆ ಅಪೆಂಡಿಕ್ಸನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆಯುವುದೇ ಅತ್ಯುತ್ತಮ ಚಿಕಿತ್ಸೆ. ಈ ಶಸ್ತ್ರಚಿಕಿತ್ಸೆಯನ್ನು ಮಾಮೂಲಿ ವಿಧಾನದಲ್ಲೂ, ಲೆಪ್ರೋಸ್ಕೋಪಿ ವಿಧಾನದಲ್ಲೂ ಮಾಡಬಹುದು. ಇದೊಂದು 15-20 ನಿಮಿಷ ತಗಲುವ, ಸರಳ ಹಾಗೂ ನಿರಪಾಯಕಾರಿ ಚಿಕಿತ್ಸೆ. ಈ ಚಿಕಿತ್ಸೆಯನ್ನು ಆದಷ್ಟು ಬೇಗನೆ (24 ಗಂಟೆಗಳೊಳಗಾಗಿ) ಮಾಡಿಸಿಕೊಳ್ಳುವುದೇ ಉತ್ತಮ. ಶಸ್ತ್ರಚಿಕಿತ್ಸೆಯನ್ನು ಮುಂದುಹಾಕುವುದರಿಂದ ಅಥವಾ ಮಾಡದೇ ಇರುವುದರಿಂದ ಹೊಟ್ಟೆಯೊಳಗೆ ಕೀವಾಗುವುದು. ಅಪೆಂಡಿಕ್ಸ್ ಕರುಳಿನ ಮಧ್ಯೆ ಹೂತು ಹೋಗುವುದು (mass) ಹಾಗೂ ಪೆರಿಕೋನೈಟಿಸ್ ಎಂಬ ಮಾರಣಾಂತಿಕ ತೊಂದರೆಗಳಾಗಬಹುದು.

ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು.
ಸಂಚಾರಿ ದೂರವಾಣಿ ನಂ. : 98451 36322

## ವೈದ್ಯಕೀಯ ಚಿಕಿತ್ಸೆಯ ಸಹಾಯಕ್ಕಾಗಿ ಮನವಿ

ಉಡುಪಿ ತಾಲೂಕಿನ ಮಜೂರು ಗ್ರಾಮದಲ್ಲಿ ವಾಸವಾಗಿರುವ ಸುಬ್ರಹ್ಮಣ್ಯ ರಾವ್ ಎಂಬ ನಾನು ಹೋಟೇಲಿನಲ್ಲಿ ಕೆಲಸ ಮಾಡಿಕೊಂಡು ನನ್ನ ಮಡದಿ ಹಾಗೂ ಎರಡು ಮಕ್ಕಳನ್ನು ಸಾಕಿಕೊಂಡು ಜೀವನ ಸಾಗಿಸುತ್ತಿದ್ದೆ. ಈ ಸಂದರ್ಭದಲ್ಲಿ ಸಿಹಿ ಮೂತ್ರದ ಕಾಯಿಲೆಗೆ ಒಳಗಾಗಿ ಕೆಲಸ ಮಾಡದ ಪರಿಸ್ಥಿತಿ ಒದಗಿ ಬಂತು. ಹಾಗಾಗಿ ಸಂಪಾದನೆ ಇಲ್ಲದೇ ಅತಿ ಕಷ್ಟದ ಸಂದರ್ಭ ಬಂತು.

ನನ್ನ ಆರೋಗ್ಯದ ಸ್ಥಿತಿ ಮತ್ತಷ್ಟು ಬಿಗಡಾಯಿಸಿ ಮೂತ್ರಪಿಂಡದ ಕಾಯಿಲೆಗೆ ಒಳಗಾದೆ. ಇದೀಗ ನನ್ನ ಮೂತ್ರಪಿಂಡಗಳು ಸರಿಯಾಗಿ ಕೆಲಸ ಮಾಡದ ಕಾರಣ ಕಾಲ ಕಾಲಕ್ಕೆ ಡಯಾಲಿಸ್ ಮಾಡುವ ಗಂಭೀರ ಪರಿಸ್ಥಿತಿ ನನ್ನದು. ಈಗಾಗಲೇ ಔಷಧ ಮತ್ತು ಚಿಕಿತ್ಸೆಗೆ 10 ಲಕ್ಷಕ್ಕೂ ಮಿಕ್ಕಿ ಖರ್ಚು ಮಾಡಿ ಕೈ ಚೆಲ್ಲಿರುತ್ತೇನೆ.

ನನ್ನ ಎರಡೂ ಮಕ್ಕಳು ಶಾಲೆಗೆ ಹೋಗುತ್ತಿರುವವರು. ನನ್ನ ಮಡದಿಗೆ ಏನೂ ಕೆಲಸವಿಲ್ಲ. ನನಗೆ ಕೆಲಸ ಮಾಡಲು ಶಕ್ತಿ ಇಲ್ಲ. ಈ ಸನ್ನಿವೇಶದಲ್ಲಿ ನನ್ನ ಆರ್ಥಿಕ ಪರಿಸ್ಥಿತಿ ಹದಗೆಟ್ಟು ತೀರಾ ಯಾಚನೀಯ ಸ್ಥಿತಿ ನನ್ನದಾಗಿದೆ.

ನನ್ನ ಅನಾರೋಗ್ಯದ ಈ ಗಂಭೀರ ಪರಿಸ್ಥಿತಿಯಲ್ಲಿ, ನನ್ನ ಸಾವು-ಬದುಕಿನ ಅಸಹನೀಯ ಸ್ಥಿತಿಯಲ್ಲಿ ನನ್ನ ಆರೋಗ್ಯದ ಸುಧಾರಣೆಗೆ ಬೇಕಾದ ವೈದ್ಯಕೀಯ ಚಿಕಿತ್ಸೆಗೆ ಧನ ಸಹಾಯವನ್ನು ತಮ್ಮಿಂದ ಸಾಧ್ಯವಾದಷ್ಟು ಮಾಡಬೇಕಾಗಿ ಕಳಕಳಿಯ ವಿನಂತಿ.

ಸಾವು ಅನಿವಾರ್ಯವಾದರೂ, ಅಕಾಲಿಕ ಮತ್ತು ಅಸಹನೀಯ ಸಾವು ಕುಟುಂಬವನ್ನು ನಿರಾಶ್ರಯಗೊಳಿಸುತ್ತದೆ. ತಾವು ಈ ಸಹೋದರನ ಉಳಿವಿಗಾಗಿ ಹೃತ್ಪೂರ್ವಕವಾಗಿ ಸಹಾಯ ಮಾಡಬೇಕೆಂದು ನಮ್ರ ಅರಿಕೆಗಳು. ತುಂಬಾ ಕೃತಜ್ಞತೆಗಳೊಂದಿಗೆ

ಸಹಾಯ ನಿರೀಕ್ಷೆಯಲ್ಲಿ ತಮ್ಮ ವಿಶ್ವಾಸಿ,

**- ಕೆ. ಸುಬ್ರಹ್ಮಣ್ಯ ರಾವ್**

**ವಿಳಾಸ : S/O ನಾಗಪ್ಪಯ್ಯ ಶ್ಯಾನುಭೋಗ, 'ಗಿರಿಜ ಲಕ್ಷ್ಮಿ ನಿವಾಸ', ಪೋಸ್ಟ್ ಮಜೂರು, ಕಾಪು - 574 106, ಉಡುಪಿ ತಾಲೂಕು ಮತ್ತು ಜಿಲ್ಲೆ.**

**ಉಳಿತಾಯ ಖಾತೆ ಸಂಖ್ಯೆ : 0125/203/1108 - ಸಿಂಡಿಕೇಟ್ ಬ್ಯಾಂಕ್, ಕಾಪು ಶಾಖೆ.**

## ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ನಿ) ಉಡುಪಿ

**ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರೋಡ್ ಉಡುಪಿ -1. ದೂರವಾಣಿ : 2522408**

### ಸನ್ಮಾನ್ಯ ಸದಸ್ಯರ ಅವಗಾಹನೆಗೆ

1. **2007-2008ನೇ ವರ್ಷದ ಲಾಭಾಂಶ (ಪಾಲು ಮುನಾಫೆ) ವಿತರಣೆ**
   ತಾ.11-07-2009ರಂದು ನಡೆದ ಸೊಸೈಟಿಯ ವಿಶೇಷ ಸರ್ವಸದಸ್ಯರ ಸಭೆಯಲ್ಲಿ ನಿರ್ಣಯ ಕೈಗೊಂಡಂತೆ ಪ್ರಾಥಮಿಕ ಸದಸ್ಯರಿಗೆ ಶೇ.10 ಲಾಭಾಂಶ (ಪಾಲು ಮುನಾಫೆ) ನೀಡಲಾಗಿದೆ. ಉಳಿತಾಯ ಖಾತೆ ಹೊಂದಿರುವ ಸದಸ್ಯರ ಖಾತೆಗಳಿಗೆ ಲಾಭಾಂಶವನ್ನು ಜುಲೈ ತಿಂಗಳಲ್ಲಿ ಜಮೆ ಮಾಡಲಾಗಿದೆ. ಉಳಿತಾಯ ಖಾತೆ ತೆರೆಯದೇ ಇರುವ ಸದಸ್ಯರು ಖುದ್ದಾಗಿ ಸೊಸೈಟಿಗೆ ಬಂದು ಲಾಭಾಂಶವನ್ನು ಪಡೆದುಕೊಳ್ಳಬಹುದು.
2. **ಉಳಿತಾಯ ಖಾತೆ ತೆರೆದರೆ ಒಳಿತು :**
   ಉಳಿತಾಯ ಖಾತೆ ತೆರೆಯದೇ ಇರುವವರು ಒಂಟಿಯಾಗಿ ಅಥವಾ ಜಂಟಿಯಾಗಿ (ಕುಟುಂಬಿಕರು) ಉಳಿತಾಯ ಖಾತೆ ತೆರೆದರೆ (ಕನಿಷ್ಠ ರೂ.100/- ಮೂಲಬಂಡವಾಳದೊಂದಿಗೆ) ಆಯಾ ವರ್ಷದ ಲಾಭಾಂಶವನ್ನು ಆ ಉಳಿತಾಯ ಖಾತೆಗೆ ಕೂಡಲೇ ಜಮೆ ಮಾಡಲಾಗುವುದು.
3. **ಲಾಭಾಂಶ ಪಡೆದುಕೊಳ್ಳಲು ವಾಯಿದೆ :**
   ಯಾವುದೇ ಒಂದು ವರ್ಷದ ಲಾಭಾಂಶವನ್ನು ಅದು ಘೋಷಿಸಲ್ಪಟ್ಟಂದಿನಿಂದ ಐದು ವರ್ಷದೊಳಗೆ ಪಡೆದುಕೊಳ್ಳತಕ್ಕದ್ದು. ಇಲ್ಲದಿದ್ದರೆ 5 ವರ್ಷಗಳ ನಂತರ ಅದನ್ನು ಸೊಸೈಟಿಯ ಶಾಸನಾತ್ಮಕ ಮೀಸಲು ನಿಧಿಗೆ ವರ್ಗಾಯಿಸಲ್ಪಡುತ್ತದೆ. **ಅಲ್ಲದೆ ಮುಂದೆ ಅದನ್ನು ಪಡೆಯಲು ಸದಸ್ಯರು ಬೇಡಿಕೆ ಸಲ್ಲಿಸುವಂತಿಲ್ಲ.**
4. **2004-05ರ ಪಾಲು ಮುನಾಫೆ :**
   ಇದನ್ನು ಪಡೆದುಕೊಳ್ಳಲು 2009ರ ಅಂತ್ಯದ ವರೆಗೆ ಮಾತ್ರ ಅವಕಾಶವಿದೆ.
6. **ಗುರುತು ಚೀಟಿ :**
   ಈ ವರೆಗೆ ಸೊಸೈಟಿಯ ಗುರುತು ಚೀಟಿ (ಐಡೆಂಟಿಟಿ ಕಾರ್ಡ್) ಪಡೆಯದೇ ಇದ್ದವರು ಪಾಸ್‌ಪೋರ್ಟ್ ಅಳತೆಯ ತಮ್ಮ 2 ಭಾವಚಿತ್ರಗಳನ್ನು ನೀಡಿ ಗುರುತಿನ ಚೀಟಿ ಪಡೆದುಕೊಳ್ಳಬಹುದು. ಭಾವಚಿತ್ರವನ್ನು ಈಗಾಗಲೇ ನೀಡಿರುವವರು ಸೊಸೈಟಿಗೆ ಬಂದು ಗುರುತಿನ ಚೀಟಿಯನ್ನು ಪಡೆದುಕೊಳ್ಳಬಹುದು.

**-ಕಾರ್ಯದರ್ಶಿ**

### ಅರ್ಚಕರು ಬೇಕಾಗಿದ್ದಾರೆ

**ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ**

ಶ್ರೀ ಶಾರದಾ ದೇವಸ್ಥಾನಕ್ಕೆ ಪೂಜಾ ವಿಧಿ-ವಿಧಾನಗಳನ್ನು ಬಲ್ಲ ಓರ್ವ ಅರ್ಚಕರು ಬೇಕಾಗಿದ್ದಾರೆ. ಅರ್ಚಕರಿಗೆ ವಾಸ್ತವ್ಯಕ್ಕೆ ಮನೆ ವ್ಯವಸ್ಥೆಯಿದ್ದು, ಪೂರ್ಣಾವಧಿ ಶ್ರೀ ಶಾರದಾ ದೇವಸ್ಥಾನದಲ್ಲಿ ಇರಬೇಕಾಗುತ್ತದೆ.

*ಆಸಕ್ತರು ಕೂಡಲೇ ವಿವರಗಳೊಂದಿಗೆ ಸಂಪರ್ಕಿಸಿರಿ :*

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು , ಉಡುಪಿ-2.**
**ದೂರವಾಣಿ : 0820-2520754**

## ವಧೂ-ವರರ ವೇದಿಕೆ

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.**

ಸಮಾಜದ ವಿವಾಹ ಯೋಗ್ಯ ವಧೂ-ವರರ ನೋಂದಣಿ, ವಿವಿಧ ಮಾಹಿತಿ ಮೊದಲಾದವುಗಳನ್ನು ಆಸಕ್ತ ಹೆತವರು ಪಡೆದುಕೊಂಡು ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶವಿದೆ. ಸಮಾಜ ಬಾಂಧವರು ವೇದಿಕೆಯ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

**- ಅಧ್ಯಕ್ಷರು, ವಧೂವರರ ವೇದಿಕೆ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-2**

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ

**ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ**

### 2008-09ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

**ಪ್ರಿಯರೇ,** **01-10-2009**

**ಸಂಘದ ವಾರ್ಷಿಕ ಮಹಾಸಭೆಯು ತಾ.08-11-2009ನೇ ರವಿವಾರ ಬೆಳಿಗ್ಗೆ 10-30 ಗಂಟೆಗೆ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಸಭಾಭವನದಲ್ಲಿ ನಡೆಯಲಿದೆ. ಸಂಘದ ಸದಸ್ಯರೆಲ್ಲರೂ ಈ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.**

**ವಿಷಯ ಸೂಚಿ**

1. ಪ್ರಾರ್ಥನೆ
2. ಸ್ವಾಗತ
3. 2007-2008ನೇ ಸಾಲಿನ ವಾರ್ಷಿಕ ಮಹಾಸಭೆಯ ವರದಿಯ ಅಂಗೀಕಾರ
4. 2008-2009ನೇ ವರ್ಷದ ಕಾರ್ಯಕ್ರಮಗಳ ವರದಿಯ ಅಂಗೀಕಾರ
5. 2008-2009ನೇ ವರ್ಷದ ಆಯ-ವ್ಯಯ ಮತ್ತು ಆಸ್ತಿ-ಜವಾಬ್ದಾರಿ ತಃಖ್ತೆಗಳ ಪರಿಶೋಧಿತ ವರದಿಯ ಮಂಡನೆ ಮತ್ತು ಅಂಗೀಕಾರ
6. 2009-2010ನೇ ವರ್ಷಕ್ಕೆ ಅಂದಾಜು ಆಯವ್ಯಯ ಪಟ್ಟಿಯ ಅಂಗೀಕಾರ
7. 2009-2010ನೇ ವರ್ಷಕ್ಕೆ ಲೆಕ್ಕ ಪರಿಶೋಧಕರ ನೇಮಕ
8. 2009-2010ರಿಂದ 2011-12ರ ವರೆಗಿನ ಅವಧಿಗೆ ಆಡಳಿತ ಮಂಡಳಿ ಸದಸ್ಯರ ಆಯ್ಕೆ.
9. ಅಧ್ಯಕ್ಷರ ಅನುಮತಿಯ ಮೇರೆಗೆ ಬರತಕ್ಕ ಇತರ ವಿಷಯಗಳು
10. ಧನ್ಯವಾದ ಸಮರ್ಪಣೆ

ಸಹಿ/-
**ಕಾರ್ಯದರ್ಶಿ**

ವಿ.ಸೂ. : ಚರ್ಚೆಯ ವಿಷಯಗಳೇನಾದರೂ ಇದ್ದಲ್ಲಿ ಅದನ್ನು ಮಹಾಸಭೆಯ ಮೂರು ದಿನಗಳಿಗೆ ಮುಂಚಿತವಾಗಿ ಕಾರ್ಯದರ್ಶಿಯವರಿಗೆ ಬರಹ ಮೂಲಕ ತಿಳಿಸಬೇಕು.

**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com


Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

**PRAMOD**
AUTOMOBILES
KARANGALPADY, MANGALORE -575 003.

Ph : 2491723 (0)
2493633 (H.O.)
2212723 (R)

: Wholesale & Retail Dealers in :
2 & 3 WHEELERS SPARES & ACCESSORIES

Prop. :Ln.K. HARSHA KUMAR



**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (0)

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

Owned & Published by : K. Venugopal Rao, Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org